# ಕಾವ್ಯ ಗುಚ್ಛ




ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ಮಡಿಕೇರಿ ನಗರ ದಸರಾ ಸಮಿತಿ ( ರಿ. ), ಮಡಿಕೇರಿ.

# ಕಾವ್ಯಗುಚ್ಛ

## ಬಹುಭಾಷಾ ಕವನ ಸಂಕಲನ

ಗೌರವ ಸಂಪಾದಕರು

**ಬಾಚರಣಿಯಂಡ ಪಿ. ಅಪ್ಪಣ್ಣ**

**ವಿ. ಜಿ. ಟೇಕ್‌ರಾಜ್**

**ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ**

ಮಡಿಕೇರಿ ನಗರ ದಸರಾ ಸಮಿತಿ,

ಮಡಿಕೇರಿ.

# KAVYAGUCHHA

A collection of poems penned by local poets in several languages including Vernacular, Hindi & English. Edited by Shridhar Hoovalli, Published by The Karnataka Kodava Sahitya Academy, Madikeri during October, 2001.

ಕ್ರಯ : **5.00**

ಪ್ರಕಾಶಕರು : ರಿಜಿಸ್ಟ್ರಾರ್,
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,
ಮ್ಯಾನ್ಸ್ ಕಾಂಪೌಡ್ ರಸ್ತೆ,
ಮಡಿಕೇರಿ - 571 201
ದೂರವಾಣಿ : 29074

ಮುದ್ರಕರು : ಹೀರಾ ಆಫ್‌ಸೆಟ್ ಪ್ರಿಂಟರ್ಸ್,
ವ್ಯಾಲೀಫ್ಯೇರ್,
ಬ್ರಾಹ್ಮಣರ ಬೀದಿ,
ಮಡಿಕೇರಿ - 571 201
ದೂರವಾಣಿ : 08272-25753

# ಸಂಪಾದಕರ ನುಡಿ

ಆತ್ಮೀಯರೇ,

ಐತಿಹಾಸಿಕ ನಾಡಹಬ್ಬದ ಅಂಗವಾಗಿ ಮಡಿಕೇರಿ ದಸರಾ ಕವಿ ಗೋಷ್ಠಿ ಸಮಿತಿ ಸಂಪಾದಿಸಿದ "ಕಾವ್ಯಗುಚ್ಛ" ಶೀರ್ಷಿಕೆಯ ಕವನ ಸಂಕಲನವನ್ನು ನಿಮ್ಮ ಮುಂದಿಡಲು ಹರ್ಷಿಸುತ್ತೇವೆ. ಇದು ದಸರಾ ಬಹುಭಾಷಾ ಕವಿಗೋಷ್ಠಿಗೆ ಸಂಬಂಧಿಸಿದಂತೆ ಸಮಿತಿ ಪ್ರಕಟಿಸಿದ ಮೂರನೆ ಕೃತಿ.

ಕಳೆದ ವರ್ಷ ಕವಿಗೋಷ್ಠಿಯಲ್ಲಿ ವಾಚಿಸಲ್ಪಟ್ಟ ಕವನಗಳು "ನವರಾತ್ರಿಯ ಕೋಲ್ಮಿಂಚು" ಕೃತಿಯಲ್ಲಿ ಒಡಮೂಡಿದ್ದವು. ಇದೀಗ ಕೊಡಗು ಜಿಲ್ಲೆಯ 36 ಕವಿಗಳ ಕನಸು-ಕನವರಿಕೆಗಳು ಈ ಬಾರಿ "ಕಾವ್ಯಗುಚ್ಛ"ವಾಗಿ ಮೂರನೇ ಕೃತಿಗೆ ಇಳಿದಿವೆ.

ವರ್ಷಂಪ್ರತಿ ನಾಡಹಬ್ಬದ ಸಂಭ್ರಮದಲ್ಲಿ ನಡೆಸಲಾಗುವ ಕವಿಗೋಷ್ಠಿಯಲ್ಲಿ ವಾಚನಗೊಳ್ಳುವ ಕವನಗಳನ್ನು ಮುದ್ರಣರೂಪದಲ್ಲಿ ಹಿಡಿದಿಡುವ ನಮ್ಮ ಪ್ರಯತ್ನಕ್ಕೆ "ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ" ಪ್ರಧಾನ ಆಧಾರ ಸ್ಥಂಭ. ಕಳೆದ ಬಾರಿಯಂತೆ ಈ ವರ್ಷವೂ ಸಂಕಲನ ಹೊರತರಲು ಆರ್ಥಿಕ ನೆರವು ಒದಗಿಸಿದ ಅಕಾಡೆಮಿ ಅಧ್ಯಕ್ಷ ಶ್ರೀ ಬಾಚರಣಿಯಂಡ ಪಿ. ಅಪ್ಪಣ್ಣ, ರಿಜಿಸ್ಟ್ರಾರ್ ಶ್ರೀ ಕೆ. ಎ. ಗಣಪತಿ ಹಾಗೂ ಸದಸ್ಯರೆಲ್ಲರಿಗೆ ಸಮಿತಿ ಅಭಾರಿಯಾಗಿದೆ.

ಈ ಬಾರಿ ಕವನಗಳಿಗಾಗಿ ಆಹ್ವಾನ ನೀಡಿದಾಗ ಜಿಲ್ಲೆಯಿಂದ ಒಟ್ಟು 68 ಬರಹಗಾರರಿಂದ 10 ಭಾಷೆಯ 73 ಕವನಗಳು ಸಮಿತಿಯ ಕೈ ಸೇರಿದವು. ಈ ಪೈಕಿ ಕನ್ನಡದ 9, ಕೊಡವ ಭಾಷೆಯ 9 ಹಾಗೂ ಇತರ ಭಾಷೆಯ 10 ಹೀಗೆ 4 ಜನರಿದ್ದ ಆಯ್ಕೆ ಸಮಿತಿ ಆಯ್ದು ಕೊಟ್ಟ 36 ಕವನಗಳು ಇಲ್ಲಿವೆ.

ಸಮಿತಿಯ ಕೈ ಸೇರಿದ ಎಲ್ಲ ಕವನ ಕವಿಗಳಿಗೆ ವೇದಿಕೆ ಒದಗಿಸಿ ಕೊಡುವುದು ದುಸ್ಸಾಧ್ಯವೇ ಸರಿ. ಕವನಗಳ ಒತ್ತಡ, ಸಮಯದ ಅಭಾವ, ಕೃತಿಯ ಗಾತ್ರ... ಇತರ ಕಾರಣಗಳಿಂದಾಗಿ ಸೀಮಿತ ಸಂಖ್ಯೆಯ ಆಯ್ಕೆಗೆ ಮೊರೆ ಹೋಗಬೇಕಾದ ಅನಿವಾರ್ಯ ಸ್ಥಿತಿ ಸಮಿತಿಯದು.

ಹಾಗೆಂದು, ವಾಚನಕ್ಕೆ ಆಯ್ಕೆಯಾದವು ಮಾತ್ರ ಉತ್ತಮ ಗುಣಮಟ್ಟವಾದವು, ಅವಕಾಶ ನಿರಾಕರಿಸಿದವು ಕಳಪೆ ಮಟ್ಟದ್ದು ಎಂದು ಭಾವಿಸುವ ಅಗತ್ಯವಿಲ್ಲ. ಇತಿಮಿತಿಯ ನೆಲೆಯಲ್ಲಿ ಕಸರತ್ತು ನಡೆಸಬೇಕಾದ ಕಾರಣದಿಂದ, ಗುಣಮಟ್ಟದ ದೃಷ್ಟಿಯಿಂದ ಉತ್ತಮವಾಗಿದ್ದರೂ ಕೆಲವು ಕವನಗಳನ್ನು ಅನಿವಾರ್ಯವಾಗಿ ಕೈಬಿಡಬೇಕಾದ ಸ್ಥಿತಿ ಎದುರಾಯಿತು ಎಂಬುದನ್ನು ನಮ್ರವಾಗಿ ಒಪ್ಪಿಕೊಳ್ಳುತ್ತೇವೆ.

ಪ್ರಮುಖ ವಿಷಯವೆಂದರೆ, ಈ ಬಾರಿಯ ಸಮಿತಿಯು ಮಕ್ಕಳಿಗೆ ಅವಕಾಶ ಕಲ್ಪಿಸಬೇಕೆಂದು ಸಲಹೆ ನೀಡಿದ್ದರಿಂದ ಮಕ್ಕಳ ಕವನಗಳನ್ನು ಆಹ್ವಾನಿಸಲಾಗಿ ಬಂದ 8 ಕವನಗಳಲ್ಲಿ ಉತ್ತಮವಾದ 4 ಕವನಗಳನ್ನು ಆಯ್ಕೆ ಮಾಡಿದೆ. ಅವುಗಳನ್ನು ಈ ಕಾವ್ಯಗುಚ್ಛದಲ್ಲಿ ಮುದ್ರಿಸಲಾಗಿದೆ.

ಕವಿಗೋಷ್ಠಿ ಸಮಿತಿಗೆ ಹರಿದು ಬಂದ ಕವನಗಳ ಸಂಖ್ಯೆಯನ್ನು ಗಮನಿಸಿದರೆ ಸಮಿತಿಯ ಹೆಗಲಿಗೆ ಬಿದ್ದ ಒತ್ತಡದ ಅರಿವು ತಮಗಾಗುತ್ತದೆ ಎಂದು ಭಾವಿಸುತ್ತೇವೆ.

ಆಹ್ವಾನ ಮನ್ನಿಸಿ ಕವನ ಕಳುಹಿಸಿದ ಕವಿಗಳಿಗೆ, ಕವನಗಳ ಆಯ್ಕೆ ಕಸರತ್ತು ನಡೆಸಿದ ಸ್ನೇಹಿತರಿಗೆ, ಸಾಂಪ್ರದಾಯಿಕ ನೆಲೆಯಲ್ಲಿ ದಸರಾ ಸಂಭ್ರಮವನ್ನು ಮುಖಪುಟದಲ್ಲಿ ಕಟ್ಟಿಕೊಟ್ಟ ಕಲಾವಿದ ಶ್ರೀ ಬಿ. ಆರ್. ಸತೀಶ್, ಮುದ್ರಣದ ಹೊಣೆ ನಿರ್ವಹಿಸಿದ ಮಡಿಕೇರಿಯ "ಹೀರಾ ಅಸೋಸಿಯೇಶನ್ ಪ್ರಿಂಟರ್ಸ್"ನ ಸಂಸ್ಥೆಯವರಿಗೆ, ಮಡಿಕೇರಿ ನಗರ ದಸರಾ ಸಮಿತಿ ಅಧ್ಯಕ್ಷ ಶ್ರೀ ವಿ. ಜಿ. ಟೇಕ್‌ರಾಜ್ ಮತ್ತು ಇತರ ಪದಾಧಿಕಾರಿಗಳು ಹಾಗೂ ನನ್ನೊಂದಿಗೆ ಒತ್ತಾಸೆಯಾಗಿ ನಿಂತ ಸಮಿತಿ ಸದಸ್ಯರು ಹಾಗೂ ಇತರ ಎಲ್ಲ ಮಿತ್ರರಿಗೆ ನಾನು ಕೃತಜ್ಞ.

16-10-2001 — ಎಂ. ಶ್ರೀಧರ್ ಹೂವಲ್ಲಿ.

ಮಡಿಕೇರಿ.

# ಕೊಡವ ಕವನಗಳು

| | ಶೀರ್ಷಿಕೆ | | ಕವಿ |
|---|---|---|---|
| 1 | ಎನ್ನ್‌ಂಗ್ ಜೀಂವ ತಂದಿಯ | - | ಚೇಂದ್ರಿಮಾಡ ಜಿ. ಮುತ್ತಪ್ಪ |
| 2 | ದುರಾಸೆರ ಫಲ | - | ಮೂವೇರ ರೇಖಾ ಪ್ರಕಾಶ್ |
| 3 | ಜಡ್ಡೆ | - | ಚೆಟ್ಟಂಗಡ ರವಿ ಸುಬ್ಬಯ್ಯ |
| 4 | ಆತ್ಮ ಬಿಕ್ಕ್‌ಚಿ.....! | - | ಉಳ್ಳಿಯಡ ಡಾಟಿ ಪೂವಯ್ಯ |
| 5 | ಕಷ್ಟ ಬಂದಾಕ | - | ಎನ್. ಬೇಬಿ ಚಿಣ್ಣಪ್ಪ |
| 6 | ಕವಿ ಬಾಳ್ | - | ಬೊಟ್ಟೋಳಂಡ ಮಿಟ್ಟು ಪೂಣಚ್ಚ |
| 7 | ಬಿಚ್ಚ್ಯಾರ್ ತಿಂಗತ್ ಕೊಡಗ್ ! | - | ಐನಂಡ ಎಂ. ಧನು |
| 8 | ಕೋರಿಕೆ | - | ಪಾಲೆರ ರಾಣಿ ಅಪ್ಪಣ್ಣ |
| 9 | ಈಶ್ವರಂಡ ಆಟ್ | - | ಕರವಟ್ಟಿರ ಬಿ. ಅಯ್ಯಣ್ಣ |
| 10 | ನೀನ್ ಎಣ್ಣೋಲಿಂಜತ್ | - | ಎ. ಪ್ರಮೀಳ ಕರುಂಬಯ್ಯ |

# ಇತರ ಭಾಷಾ ಕವನಗಳು




| | ಶೀರ್ಷಿಕೆ | | ಕವಿ |
|---|---|---|---|
| 1 | The Foolish worldly Gaiety | - | Niveditha Shetty B.K. |
| 2 | Take & Guess | - | Vikram Thimmanna |
| 3 | The Science Concept | - | Mrs. K. Prashanthi Pooviah |
| 4 | ಕೆಮಿ ಮಾತ್ | - | ಬಾರಿಯಂಡ ಆರ್. ಜೋಯಪ್ಪ |
| 5 | ಓರ್ಮತ್ತೆಟ್ಟ್ | - | ದೇವಿದಾಸ್. ಕೆ. ಪಿ. |
| 6 | ಏಕ್ತಾ | - | ತೌಫೀಕ್. ಪಿ. ವೈ. |
| 7 | ಹುಷಾರ್ ಹಾಂಗಾ ಸುಣೆ ಅಸ್ಸಾತ್ | - | ವರದಾಸುತ ಚೇತನ |
| 8 | ಕೊತ್ತ ಶತಾಬ್ಧಾನಿಕಿ ಸ್ವಾಗತಂ ! | - | ಸಬಲಂ ಭೋಜಣ್ಣ ರೆಡ್ಡಿ |
| 9 | ಅವು ಎಂಚಿನಾ | - | ಟೆಲಿಕಾಂ ಕೃಷ್ಣ |
| 10 | ಕಾಲಂ ಮಾರಿಪೋಚ್ಚಿ | - | ಟಿ. ಎಂ. ಚಂದ್ರಶೇಖರ |
| 11 | ಹಮಾರ ನಾಡ ಹಬ್ಬ - ದಸರಾ | - | ಕ್ಯೂ. ಎಸ್. ಚಾಂದ್ |

# ಕನ್ನಡ ಕವನಗಳು


| | ಶೀರ್ಷಿಕೆ | | ಕವಿ |
|---|---|---|---|
| 1 | ಭಾವ ಭಂಡಾರ | - | ನಾಗೇಶ್ ಕಾಲೂರು |
| 2 | ಇಳೆಯ ಅಳಲು | - | ಗೀತಾಭಾವೆ |
| 3 | ಹಣತೆ | - | ಯು. ಎಸ್. ಶ್ರೀಧರ ಆರಾಧ್ಯ |
| 4 | ಅಮ್ಮನ ನೋಡಿದಿರಾ..... ? | - | ರವಿ ಬಿ. ಎನ್. |
| 5 | ಹೂ ಸವಾಲು | - | ನಯನಾ ಕಾಶ್ಯಪ್ |
| 6 | ಬರ ಬಂದಡರಿತು | - | ಚಂದ್ರಶೇಖರ ಮಲ್ಲೋರಹಟ್ಟಿ |
| 7 | ನಾ ಕವಿಯಾಗುತ್ತಿರಲಿಲ್ಲ ! | - | ಮೀನಿಕ್ಕರ ಎ. ಮಹಮದ್ |
| 8 | ಅಸ್ಥಿ - ಆಸ್ತಿ | - | ನೆಂಪು ಕೃಷ್ಣ ಭಟ್ |
| 9 | ಶ್ರೀಕೃಷ್ಣ ಮರಣ | - | ಡಾ|| ಎಂ. ಪಿ. ಉಮಾದೇವಿ. |
| 10 | 'ಮನಸ್ಸು' | - | ಇಂದಿರಾ ಪಿ. ಈ. |
| 11 | ಹನಿಕವನ | - | ಶ್ರೀಮತಿ ಕಮಲಕರಿಯಪ್ಪ |

# ಭಾವ ಭಂಡಾರ



ಬಗೆ ಬಗೆಯ ಭಾವನೆಯ ಭಂಡಾರ ಹೃದಯ
ಕ್ಷಣ ಕ್ಷಣಕೂ ನೂರಾರು ಕವಿತೆಗಳ ಉದಯ

ನೇಮ ನೈಮಿತ್ಯಗಳ ಅನುರಣನ ಸಂವಹನ
ಭಾವ ವೈರುಧ್ಯಗಳ ಸಂಗ್ರಾಮ ಸ್ಥಾನ

ಆಗಸದ ಎತ್ತರಕೆ ಪುಟಿದೆದ್ದ ಕನಸು
ಸಾರೂಪ್ಯ ಸಾಕಾರ ಸಂಭ್ರಮಿತ ಮನಸು

ಅನಂತ ಶರಧಿಯಗುಂಟ ಅವಿರತ ಚಲನೆ
ಆದಿ ಅನಾದಿಗಳ ಭ್ರಾಂತ ಪಥ ಭ್ರಮಣೆ

ಮೇರೆಯರಿಯದ ನೀಲನಭದಾಚೆ ಪಯಣ
ಭಾವದುನ್ಮಾದಕ್ಕೆ ನಿಜಶಬ್ದಗಳ ಮರಣ

ರೂಪುಗೊಳ್ಳದ ನೂರು ಭ್ರೂಣಗಳ ಹನನ
ಮತ್ತೆ ಗರ್ಭಾಂಕುರಕೆ ಸಮ್ಮೋಹ ಸಮ್ಮಿಲನ

ಎದೆಯೊಳಗಿನಭಿಲಾಷೆ ಅನನ್ಯಾಭಿವ್ಯಕ್ತಿ
ಭಾವ ಸ್ಫುರಣದ ಕ್ಷಣದ ನೈಜ ಸಂತೃಪ್ತಿ

ಒಡಲಾಳದನುಭವಕೆ ಪದವಿಡುವ ಶಕ್ತಿ
ಜನಮನದ ನೀತಿಗಳೇ ಕವಿಮನದ ಸೃಷ್ಟಿ


ಮತ್ತೆ ಕಾಡದೆಯಿರಲಿ ಕಹಿನೆನಪುಗಳ ಭೂತ
ವರ್ತಮಾನದ ಚಿತ್ತ ಹಿಡಿದಿಡಲಿ ಶಬ್ದಾರ್ಥ

ಭವಿತವ್ಯದ ಭವ್ಯ ಸಂಭಾವ್ಯ ಮೆರವಣಿಗೆ
ಬವಣೆ ಬದುಕಿನ ಸೊಲ್ಲು ಕಾವ್ಯಕನ್ನಿಕೆಗೆ

ಕಾಲನಾಕರೆಯಾಚೆ ಮೀರಿ ಬದುಕುವ ಮನಸು
ಕೃತಿಯಾಗಿ ಸ್ಥಾಯಿಯಲಿ ಉಳಿದರದೇ ಸೊಗಸು!

- ನಾಗೇಶ್ ಕಾಲೂರು
ಕಾಲೂರು ಅಂಚೆ ಮಡಿಕೇರಿ - 571 201

# ಇಳೆಯ ಅಳಲು



ಮೆದು ಮಾತು, ಮೃಷ್ಟಾನ್ನ,
ಮಮತೆಯೊಡಲ ನನಸಿನ ಬದುಕ
ಬದಿಗಿರಿಸಿ,
ಕನಸಿನರಮನೆಗೆ ಕಾಲಿಟ್ಟ
ಮುಗುದೆಯೆದುರು
ಧನಪಿಶಾಚಿಗಳ ನರ್ತನ.
ಬೆಂಕಿಯ ಕೆನ್ನಾಲಿಗೆಗಳ ಹಿಮ್ಮೇಳ
ಅಡಿಗೆ ಬೀಳಿಸಿ ತುಳಿತುಳಿದಂತೆ
ಕೇಳುವುದು ಹೃದಯ ಗೀರುವ ಆಕ್ರಂದನ.

ಹಿಟ್ಟ ಹಾದಿಯ ಕಾದು ಕೂತವಳಿಟ್ಟ
ಎಸರು ಇಂಗುತಿದೆ.
ಮನೆಯಲ್ಲಿ ಉಪ್ಪಿನ ಕಾಳಿಲ್ಲ.
ಕಣ್ಣೇ ಸಾಗರಗಳು.
ಗಲ್ಲದ ಮೇಲೆ ಉಪ್ಪು ನೀರಿನ ಕೋಡಿ.
ಎಗ್ಗಿಲ್ಲದೇ ಬಿದ್ದ ರಾಕ್ಷಸ ಹೊಡೆತಕ್ಕೊಗ್ಗಿ,
ನುಗ್ಗು ನುಗ್ಗಾದ ಮೈಗೆ
ಮಹಡಿ ಮನೆಯಮ್ಮ ನಿತ್ತ ಮಾಸಿದ ಸೀರೆಯಲಂಕಾರ.
ನೋವ ಕಡಲನು ದಾಟಿ ಮುಳುಗುವ
ಸೂರ್ಯನೊಡನೆ ಬೆಸೆವ ತವಕ ಮನಕೆ.
ಬಿಟ್ಟೀತೇ ತೊಟ್ಟಿಲ ನಗೆಯ ಪಾಶ ?

ಮನೆ-ಮನದೊಡೆಯನ ಒಡನಾಟದ
ಗತವೈಭವದ ಮಾಸದ ನೆನಪು-ಮೆಲುಕು
ಮೂಲೆ ಸೇರಿದ ಮುದುಕಿ
ಕಾಲನ ನಿರೀಕ್ಷೆಯಲ್ಲಿ
ಮಕ್ಕಳು, ಮುದುಕಿಗೆ ಸಲ್ಲುವ
ಅನ್ನದಗುಳಗುಳ ಗಣನೆಯಲ್ಲಿ.

ನಾಲ್ಕೂ ದಿಕ್ಕುಗಳಿಂದ ನೂರಾರು ಭೂಮಿಗಳು
ಹೊರಡಿಸುತ್ತಿವೆ ಆರ್ತನಾದ
ಕೇಳುವುದೊಂದೇ ಪ್ರಶ್ನೆ,
ಕಾಡುವದೊಂದೇ ಕೊರಗು
ಶಕ್ತಿ ಮಾತೆಯ ದಾರ್ಷ್ಟ್ಯ ದೇವತೆಗಳ ಬೆಂಬಲದ
ಒಂದಂಶವಾದರೂ
ನಮಗೊದಗುವುದ್ಯಾವಾಗ?

- ಗೀತಾಭಾವೆ
ಮಡಿಕೇರಿ.

# ಹಣತೆ

ಈ ಕತ್ತಲೆಯಲಿ
ಯಾರದದು ಸೊಲ್ಲು ?

ಹಣತೆಯೇ !
ಏನದು ?

'ಕತ್ತಲೆಲ್ಲಿ' ಎಂದೆಯಾ
ಸೂರ್ಯನಿಲ್ಲವೆಂದ ಮೇಲೆ ಇನ್ನೆಲ್ಲಿಯದೆ ಬೆಳಕು
'ನಾನೆ' ಇರುವೆನೆಂದೆಯಾ!

ಹುಚ್ಚೆ ನಿನಗೆ ಎಲೆ ಮರುಳೆ
ಎತ್ತ ನೋಡಿದತ್ತಲೂ
ಎಷ್ಟೊಂದಿದೆ ಕತ್ತಲು.

ಕೋಣೆಯಲ್ಲಿ ಇಷ್ಟು ಬೆಳಕು ಬಳುಕಿದರೆ ಏನು ಬಂತು
ಠಾಣೆಯಲ್ಲೂ ಬೆಳಕು ಚೆಲ್ಲಿ ತುಳುಕಿದರೆ ಅರ್ಥವುಂಟು

ಹಾದಿ ಬೀದಿ ಮಾಲೆ ಮಾಲೆ
ಮನೆಯ ಮೂಲೆ ಮನದ ಮೂಲೆ
ಅಲ್ಲೂ ಕತ್ತಲ ಮಕ್ಕಳಾಡಿವೆ
ಕಾಡಿನಲ್ಲಿ ಮೇಡಿನಲ್ಲಿ ಗೂಡಿನಲ್ಲೂ ಮಬ್ಬಿದೆ
ಕಟ್ಟಕಡೆಗೆ ಪುಟ್ಟಹೃದಯ! ಅಲ್ಲೂ ಕಾಲ ಹಬ್ಬಿದೆ.

ಸೌಧದಲ್ಲಿ ಕತ್ತಲ ಬಲೆ
ಅಭೇದ್ಯ ಕೋಟೆಯಲೆಯಲೆ
ನಿಶೆಯದೇ ಸಂಸಾರ
ಸರಕಾರ ಅಂಧಕಾರ

ಎಷ್ಟು ಬೆಳಗಬಲ್ಲೆ ನೀನು
ಎಲೈ ಪುಟ್ಟ ಹಣತೆಯೆ?

ಹಿಡಿದರೆ ಹಿಡಿಯ ತುಂಬ
ಬಿಟ್ಟರೆ ಕೋಣೆ ತುಂಬ
ಅಷ್ಟು ಬಿಟ್ಟು ಬಿಟ್ಟರೆ
ನಿನ್ನ ಬುಡದ ನಾಣ್ಯದಗಲ ಕತ್ತಲೆಗೂ ಸೋತಿಹೆ
ಎಲೈ ಪುಟ್ಟ ಹಣತೆಯೆ!

ಏನದು ಇನ್ನೂ ಮಾತು ನಿನ್ನದು?


'ನೀನು ಬೆಳಕ ಬೀಜವೆ'!

"ಉತ್ತು ಬಿತ್ತು ಮರವ ಮಾಡಿ ಬೆಳೆವಧೀರನಾದರೆ
ಚಿಗುರು ಮೊಗ್ಗು ಹೂವು ಹಣ್ಣು ದಿವ್ಯ ಸತ್ವ ತೋರದೆ?"

ಸವಾಲೇ ಇದು!
ಯಾರಿಗೆ ?
ಅವಗೆ?
ಇವಗೆ?
ನನಗೆಯೆ!

- ಯು. ಎಸ್. ಶ್ರೀಧರ ಆರಾಧ್ಯ
ಮಾದಾಪುರ - ಕೊಡಗು ಜಿಲ್ಲೆ.

# ಅಮ್ಮನ ನೋಡಿದಿರಾ..... ?



ಸಾಹುಕಾರ್‍ರೇ ...... ನಮಸ್ಕಾರ !
ಜೀತಕ್ಕೆ ಬಂದ ಅಮ್ಮನ ನೋಡಿದಿರಾ ?
ನಿಮ್ಮ ತೋಟದಲ್ಲಿ ದಿನವಿಡೀ ದುಡಿದರೂ
ಖಾಲಿ ತಟ್ಟೆಯ ಮುಂದೆ ಕೈ ಸೋತು ಕುಳಿತವಳು.
ಮಗನ ಶಾಲೆಯ ಫೀಜಿಗೆ
ಐವತ್ತು ರೂಪಾಯಿ ಸಾಲ ಪಡೆದವಳು
ಮಳೆ-ಚಳಿ-ಗಾಳಿಗೆ ಕಲ್ಲಾಗಿ ನಿಂತವಳು!

ಆಂಟಿ-ಅಂಕಲ್ ಚೆನ್ನಾಗಿದ್ದೀರಾ...?!
ನೀವು ಅಮ್ಮನ ನೋಡಿದಿರಾ?
ಅಳುವ ತಂಗಿಯ ಬಗಲಿಗೇರಿಸಿ
ಈ ದಾರಿಯಲ್ಲೇ ಬಂದಳಲ್ಲ.....
ಒಂದು ಸೇರು ಅಕ್ಕಿ, ಎರಡು ಮೆಣಸು,
ಒಂದು ಲೋಟ ಉಪ್ಪು
ಸಾಲ ಕೇಳಲು ಬಂದವಳು!
ಹರಕು ಸೀರೆ-ಬೆವರಿದ ಹಣೆ,
ಒಲೆ ಊದಿ ಕಣ್ಣು ಊದಿಸಿಕೊಂಡವಳು!

ಸಹೋದರ - ಸಹೋದರಿಯರೇ ಕ್ಷೇಮವೇ?!
ನೀವುಗಳು ನೋಡಿದಿರಾ ಅಮ್ಮನನು?
ನಿದ್ರೆಯಿಲ್ಲದೆ ದುಡಿದ ಮಗನ
ಕ್ಷೇಮ ಕೇಳಲು ಬಂದವಳು
ಗಂಜಿ-ಅಂಬಲಿ, ಬಿರುಕಿಟ್ಟ ಬುತ್ತಿಗೆ
ಹರಕ ಸೆರಗನ್ನು ಮುಚ್ಚಿದವಳು
ಎಂಜಲು ತಟ್ಟೆಗೆ ನೊಣ ಮುತ್ತಿದ ಮೇಲೆ
ಕಣ್ಣೀರ ಒರೆಸಿ ಹೋದವಳು !

ಹೇ... ಪುಟ್ಟಿ....
ನೀನು ನೋಡಿದಿಯೇನೆ ಅಮ್ಮನನು ?!
ಹಾಜಿ ಸಾಹೇಬರ ಅಂಗಡಿಯಿಂದ
ಕಡ್ಲೆ ಮಿಠಾಯಿ ಕೊಟ್ಟವಳು
ಎಣ್ಣೆ ಹಾಕಿ, ತಲೆ ಬಾಚಿ
ನಿನ್ನ ಜಡೆ ನೆಯ್ದವಳು
ಮಲ್ಲಿಗೆ ನಗುವಿಗೆ ನೆಟಿಗೆ ತೆಗೆದು
ಹಾಲುಗಲ್ಲವ ಚಿವುಟಿದವಳು!

ಓ... ದೇವರೇ...
ನೀನು ನೋಡಿದಿಯಾ ಅಮ್ಮನನು ?
ಮಗನ ಜ್ವರ ವಾಸಿಯಾಗಲೆಂದು
ದೇವರ ತಾಯಿತ ಕಟ್ಟಿಸಿದವಳು
ಮಸೀದಿಯ ನೂಲು ಮಂತ್ರಿಸಿದವಳು
ಚರ್ಚಿಗೆ ಕ್ಯಾಂಡಲ್ ಉರಿಸಿದವಳು !

ದೇವರೇ....
ಆದರೂ, ನಿನಗೊಂದು ಪ್ರಶ್ನೆ
ತಿರುಗಿ ಬಾರದ ಕಡೆ ಹೋದ ಅಮ್ಮ
ಹಿಂತಿರುಗಿ ಬರುವಳೆ ಇಲ್ಲಿಗೆ?
ನಮ್ಮ ಕನಸು ಮುಗಿಲ ಮಲ್ಲಿಗೆ!

- ರವಿ ಬಿ. ಎನ್. ಮೂರ್ನಾಡು

# ಹೂ ಸವಾಲು

ಬೇಸಗೆಯ ಮಧ್ಯಾಹ್ನ ನವಿರು ಗಾಳಿ
ಗಿಡದ ಮೃದು ಮಧ್ಯ ಸಣ್ಣನೆಯ ಹೂವು...
ಸದ್ದಿಲ್ಲದೆ !

ಇರುವೆಯೊಂದಿಗೆ ಮಾತು ದುಂಬಿಯೊಂದಿಗೆ ಕೂಟ
ಗುಬ್ಬಿಯೊಂದಿಗೆ ಆಟ ಪ್ರಕಟ - ಅಪ್ರಕಟ
ಸೂರ್ಯ ಬಾಣಲೆಯಲ್ಲಿ ಬಿಸಿಲ ಬಿಸಿಗಾರಿಗೆ
ಬುಡದಿ ನೀರಿಲ್ಲದೆಯೂ ಮುಖ ಬಾಡದೆ
ನಿಡುಸುಯ್ಯದೆ ತನ್ಮಯತೆ ಆಡುತಿದೆ
ಕಳೆಯದೆಯೆ ಬಣ್ಣ - ಸಣ್ಣನೆಯ ಹೂವು...
ಸದ್ದಿಲ್ಲದೆ.

ರಾತ್ರಿ ಕನಸಲ್ಲಿ ಬಂತು ಹೇಗೋ ಹೂವು
ಹಕ್ಕಿಯಂತೆ, ಹಕ್ಕಿನಂತೆ ?
ಮನಸಿನೆತ್ತರ ಹಾರಿ ಚಿಂವ್ಞೂ ಚಿವುಗುಟ್ಟಿತು
ಅರಳಬಲ್ಲೆಯ ನನ್ನಗಲಕೆ...
ಸದ್ದಿಲ್ಲದೆ.

- ನಯನಾ ಕಾಶ್ಯಪ್

# ಬರ ಬಂದಡರಿತು



ಬೆಳೆಯುವ ಕುಡಿಗೆ ಬೆಂಕಿಯ ಕಿಡಿಯು
ಬದುಕಲು ಬಿಡದ ವಿಧಿಯು
ಬರಬಂದಡರಿತು ಜಗವನೆ ಸುಡುತ
ಗರ ಬಡಿದು ಉರಿದಿದೆ ಭುವಿಯು ||೧||

ಮಳೆಮೋಡವಾಗದೆ ಹನಿಯು ಸುರಿಯದೆ
ನೆಲ ಒಣಗಿದೆ ಇಲ್ಲದೆ ನೀರು
ಬದುಕು ಬೇಯುತಲೆ ಮನ ಬರಿದಾಗಿದೆ
ಬತ್ತಿದೆ ಮನುಜನ ಕಣ್ಣೀರು ||೨||

ಬಡತನ ಅಡಿಯಿಟ್ಟು ಧೂಳಾಯಿತು ಬದುಕು
ಗುಳೆ ಹೋದರು ಜನ ಎದ್ದು
ಬಡವನ ಬವಣೆಯ ಅರಿಯದ ಮನುಜರು
ಗೋಳನು ಕೇಳದೆ ಕಿವಿ ಮುಚ್ಚಿದರು ||೩||


ಭರವಸೆ ಕಾಣದೆ ಕುರುಡಾಯಿತು ಬದುಕು
ಧರ್ಮದೇವತೆ ಕಣ್ಮುಚ್ಚಿದಳು
ಹರಿಯುವ ತೊರೆಗಳು ಬತ್ತಿ ಹೋದವು
ಎಲ್ಲೆಲ್ಲೂ ಬೆಳೆ ಕಾಣದ ಭುವಿಯು ||೪||

ದಾಹ ಹಿಂಗಿಸಲು ಮಣ್ಣಿನ ಕಣಗಳೆ
ಬಾಯಿಗೆ ಬಂದು ಮುತ್ತಿದವು
ಹಸಿವ ನೀಗಲು ತೊಪ್ಪಲು ತರಗೆಲೆ
ಹೊಟ್ಟೆಗೆ ಬಂದು ಸೇರಿದವು ||೫||

ತಿನ್ನಲು ಹಿಟ್ಟಿಲ್ಲದೆ ಹಟ್ಟಿಯ ನೆರಳಿಲ್ಲದೆ
ಸೊರಗಿ ಬಿದ್ದರು ಹಸಿದ ಜನ
ಸಾಲ ಶೂಲದ ನೇಣಿಗೆ ಕೊರಳನು ಒಡ್ಡಿ
ನೆಲರಾವಿದರೂ ನೆಲೆಕಾಣದ ಜನ ||೬||

- ಚಂದ್ರಶೇಖರ ಮಲ್ಲೋರಹಟ್ಟಿ, ಕೊಡ್ಲಿಪೇಟೆ.

# ನಾ ಕವಿಯಾಗುತ್ತಿರಲಿಲ್ಲ !



ಅರೆಬಿರಿದ ಕಂಗಳಲಿ ಮಾದಕತೆ ತುಂಬಿ
ಮುಸ್ಸಂಜೆಯ ಉದ್ಯಾನದಿ ನೀನೆನ್ನ ರೇಗಿಸಿ
ಕಲ್ಪನಾವಿಲಾಸದ ಮಿಥ್ಯಮಂಚಕೆ ಕೆಡಹದಿದ್ದರೆ
ನಾ ಕವಿಯಾಗುತ್ತಿರಲಿಲ್ಲ.

ಅವರದ್ದೇ ವಿಮಾನ ಕದ್ದೊಯ್ದು
ಅವರದ್ದೇ ಅವಳಿ ಗೋಪುರಗಳಿಗೆ ಢುತ್ತೆಂದೊಡೆದು
ಹಿರಿಯಣ್ಣನ ನೆಲದಲ್ಲೂ ನರಮೇಧ ನಡೆಸಿರದಿದ್ದರೆ
"ಬೆತ್ತ ಹಿಡಿದಾತ ಬೇಕಾಗಿದ್ದಾನೆ" ಎಂದು
ಬುಷ್ ಸರ್ಕಾರ ಜಾಹೀರಾತು ನೀಡುತ್ತಿರಲಿಲ್ಲ.
'ಗಾಂಧೀ ಕೈಯಲ್ಲೂ ಬೆತ್ತವಿತ್ತು; ಲಾಡೆನ್ ಕೈಯಲ್ಲೂ ಬೆತ್ತವಿದೆ'
ಅವರಿಗೆ ಬೇಕಿರುವುದು ಅಹಿಂಸಾ ಮೂರ್ತಿಯೋ,
ಕ್ರೌರ್ಯ ರೂವಾರಿಯೋ ಎಂಬ ದ್ವಂದ್ವದಲಿ ಕ್ಷಣಕಾಲ ನಾ ಗೊಂದಲಕ್ಕೀಡಾಗದಿದ್ದಿದ್ದರೆ
ನಾ ಕವಿಯಾಗುತ್ತಿರಲಿಲ್ಲ.

ಬಡತನ ನಿರ್ಮೂಲನ ಆಂದೋಲನ'ದಿ
ಪಾಲ್ಗೊಂಡ ನನಗೆ ಮೃಷ್ಟಾನ್ನ ಭೋಜನ ದೊರೆತಾಗ
ತೇಪೆ ಹಚ್ಚಿದ ಚಿಂದಿ ಗುಡಿಸಲುಗಳಲಿ
ತಂಗಳನ್ನವೂ ದೊರೆಯದ ಬಡಜೀವಿಗಳ ಕಣ್ಣೀರು
ಆವಿಯಾಗುವುದರ ಚಿತ್ರ ಮನದಿ ಸುಳಿಯದಿದ್ದಿದ್ದರೆ
ನನಗೆ ಕಾರ್ಲ್‌ಮಾರ್ಕ್ಸ್ ನೆನಪಾಗುತ್ತಿರಲಿಲ್ಲ;
ನಾ ಕವಿಯಾಗುತ್ತಿರಲಿಲ್ಲ.


- ಮೀನಿಕ್ಕರ ಎ. ಮಹಮದ್, ಕೊಳಕೇರಿ.

## ಅಸ್ಥಿ - ಆಸ್ತಿ

ಇನ್ನೂ ಹಿಡಿದಿಲ್ಲ
ಬೆಂಕಿ -
ಅಪ್ಪನ ಅಸ್ಥಿಗೆ
ಆಗಲೇ ಶುರುವಾಯ್ತು
ಜಗಳ -
ಅಪ್ಪನ ಆಸ್ತಿಗೆ!

## ವಾಸ್ತವ

ರಾಜಕಾರಣಿಗಳಿಗೆ
ಸುಪ್ಪತ್ತಿಗೆ
ಮತದಾರನಿಗೆ
ಹೊಟ್ಟೆಗಿಲ್ಲ
ಒಪ್ಪತ್ತಿಗೆ



## ಕೈಕೊಟ್ಟ ಸಲಹೆ

ಕಳಪೆ -
ಕತೆ - ಕವನ
ಪ್ರಕಟಿಸಬೇಡಿ - ಎಂದೆ
ನಿಂತೇ ಹೋಯಿತು
ನನ್ನ ಬರಹಗಳ
ಪ್ರಕಟಣೆ!

## ಹೆದರಿಕೆ

ನಾ -
ಭೂತ -ಪ್ರೇತಗಳಿಗೆ
ಹೆದರುವುದಿಲ್ಲ;
ನನಗೆ -
ಮಡದಿಯಿದ್ದಾಳೆ

- ನೆಂಪು ಕೃಷ್ಣ ಭಟ್

ಹನಿಕವನ

## ಮಡಿಕೇರಿ ದಸರಾ

ಮುದ್ದುರಾಜನ ಕೇರಿಯಲಿ,
ಬರುತಿಹರು ನೋಡಿ
ದೇವಾನು ದೇವತೆಗಳು ಕೂಡಿ,
ಎಲ್ಲರನು ಮೋಡಿಯ ಮಾಡಿ.

## ಭೂಕಂಪ

ಕಾಣದ್ದನ್ನು ಹುಡುಕಲು,
ಬೇಕಾದನ್ನು ಪಡೆಯಲು,
ಕೊರೆಯಬೇಡಿ ತಾಯ ಒಡಲು,
ಬಾಯ್ಬಿಟ್ಟು ನುಂಗ್ಯಾ ತಾಯಿ,
ಭೂ ತಾಯಿ.

## ಸರ್ಕಾರದ ಮನೆ (ವಸತಿ ಗೃಹ)

ಇದು ಬಿಡದ ಮಳೆ
ಮನೆ ಒಳಗೆ ಕೊಡೆ ಹಿಡಿದು ನಡೆ,
ರಾತ್ರಿಯ ವೇಳೆ ಮಳೆ ಕೋಟಿನೊಳಗೆ ನಿದ್ದೆ.
ಇದು ಸರ್ಕಾರದ ಮನೆ.

## ಮಹಿಳಾ ಮೀಸಲಾತಿ

ನಿನಗುಂಟು ಶೇಕಡಾ ಮೂವತ್ತಮೂರು
ಮೀಸಲಾತಿ
ಎಲ್ಲದಕ್ಕೂ ಬೇಕು ಅನುಮತಿ
ಇನ್ನೂ ಸಿಕ್ಕಿಲ್ಲ ಅನುಮತಿಗೂ ಸದ್ಗತಿ.

- ಶ್ರೀಮತಿ ಕಮಲಕರಿಯಪ್ಪ

# ಶ್ರೀಕೃಷ್ಣ ಮರಣ

ಎಲ್ಲ ತಾಯಿಯರಿಗೂ ಗೊತ್ತು, ಶ್ರೀ ಕೃಷ್ಣನ ಬಾಲ್ಯದ ಸಾಹಸ,
ಪ್ರತಿಯೊಬ್ಬ ಹೆಣ್ಣಿನ ಬಾಯಿಯಲ್ಲಿ, ಅವನ ಯೌವ್ವನದ ಸರಸ.

ನಿಮಗೂ ಗೊತ್ತಿರಲಾರದು, ಹೇಗಾಯಿತು ಕೃಷ್ಣ ಪರಮಾತ್ಮನ ಅಂತ್ಯ,
ಸ್ವರ್ಗದಲ್ಲೂ ಘಟಿಸಿಲ್ಲ, ಅಂತಹದೊಂದು ದುರಂತ.

ಒಬ್ಬಂಟಿಯಾಗಿ ನಿದ್ರೆಯಲ್ಲಿದ್ದಾಗ, ಲೋಕಪಾಲ ಶ್ರೀಕೃಷ್ಣ,
ಬಂದು ಎದೆಯನ್ನು ಸೀಳಿಬಿಟ್ಟಿತು, ಬೇಟೆಯಾಡುವವನ ಬಾಣ.

ಕ್ಷಣದಲ್ಲಿ ನೆಲಕ್ಕೆ, ಹದಿನಾರು ಸಾವಿರ ಗೋಪಿಯರ ಸೌಭಾಗ್ಯ ಲಕ್ಷಣ,
ದ್ವಾರಕೆಯ ಮಣ್ಣಿನಲ್ಲಿ, ಹೆಜ್ಜೆ ಹೆಜ್ಜೆಗೆ ಕಡಗ, ಕರಿಮಣಿ, ಕಂಕಣ.

ಘಟಿಸಿತು ಹೇಗೆ, ಕಾಯಲಿಲ್ಲವೇ ಜಾಂಬವತಿಯ ಒಲವು?
ಸಾಧ್ಯವೇ ಇಲ್ಲ ಘಟಿಸಲು, ಇದ್ದಾಗ ಕಾಳಿಂದಿಯ ಕಣ್ಗಾವಲು.

ಹಣೆಗೆ ಕೊಟ್ಟು ಕಳುಹಿಸಿರಲಿಲ್ಲವೇ ಅನುರಾಧ, ಶುಭ ಚುಂಬನ,
ಬಿಗಿಯಾಗಿ ಇರಲಿಲ್ಲವೇ, ಭಾಮೆಯ ಬೀಳ್ಕೊಡುಗೆಯ ಆಲಿಂಗನ.

ಪೂರ್ತಿ ಕೆಂಪಾಗಿ ಹೋಗಿತ್ತಂತೆ ನಾಗಜಿತೆ ಎತ್ತಿದ್ದ ದೃಷ್ಟಿ ಓಕುಳಿ,
ಆದರೂ ಕಳಿಸಿದಳಂತೆ ಹೇಳಿ, ಬರಲು ಏಳುವ ಮೊದಲು ಗೋಧೂಳಿ.

ಕೊಂದ ಜಿಂಕೆಯ ಕಚ್ಚಿ, ಎಳೆಯುತ್ತಾ ಒಯ್ಯುವಂತೆ ಚಿರತೆ ಮರೆಗೆ,
ಕಡಲಿನ ಒಡಲನ್ನು ಸೇರಿತು ಪಾರ್ಥಿವ, ಅಪ್ಪಳಿಸಿ ಬಂದ ತೆರೆಗೆ.

ಎಲ್ಲರಿಂದ ಚೀತ್ಕಾರ... ಹಾಹಾಕಾರ, ಕಿವುಡಾಗಿಸುವ ಆಕ್ರಂದನ,
ಭಕ್ತವತ್ಸಲ ಶ್ರೀಕೃಷ್ಣ ಆಗಿದ್ದ, ಎಲ್ಲರಿಗೂ, ಎಲ್ಲದಕ್ಕೂ ಮೌನ.

ಅಂತಿಮ ಸಂಸ್ಕಾರ ನಡೆಯಲಿಲ್ಲ, ನಾರಿಯರ ಹೃದಯವನ್ನು ಗೆದ್ದವನಿಗೆ,
ಎಂಥ ದಾರುಣ ಅಂತ್ಯ, ಲೋಕನಾಯಕ ಮುದ್ದು ಮಾಧವನಿಗೆ.

ಮರಿ ಮೀನು ಕುಕ್ಕಿ ಕಣ್ಣಾಲಿಗಳ, ಕಿತ್ತೆಳೆದು ಸುರುಳಿಗೂದಲ,
ಹಿರಿಮೀನು ಗಾಯಗೊಳಿಸಿದವು, ಅವನ ಸುರಸುಂದರ ಕೊರಳ.

ಹಾಗೆಂದು ತಿಂದು ಮುಗಿಸಲೂ ಇಲ್ಲ, ಪೂರ್ತಿ ಕಚ್ಚಿ ಕಚ್ಚಿ,
ಎಳೆದಂತೆ ಚರ್ಮ, ಗೊತ್ತಾಗಲು ಬಿಟ್ಟವು, ಅರ್ಧದಲ್ಲೇ ಬೆಚ್ಚಿ.

ಅರ್ಧ ಕಿತ್ತು ನೇತಾಡುವ ಚರ್ಮ... ನೀರಿಗಿಳಿಯುತ್ತಿರುವ ನೆಣ,
ಶ್ರೀಕೃಷ್ಣ ಪರಮಾತ್ಮನದೇ, ಜಗತ್ತು ಕಂಡ ಅತ್ಯಂತ ಕುರೂಪಿ ಹೆಣ.

ಕೊಳೆತು ಕೂಡ ಹೋಗಲಿಲ್ಲ, ತೇಲುತ್ತಲೇ ಇತ್ತು ಕೊನೆಯವರೆಗೆ,
ಇಂದೂ ಇರಬಹುದು ಅಲುಗಾಡುತ್ತ, ಸಿಲುಕಿ ಬಂಡೆಯ ಮರೆಗೆ.

ದ್ವಾರಕೆಯ ನೆಲದಲ್ಲಿ ಎಣಿಸಲು ಸಾಧ್ಯ, ಮಣ್ಣಿನ ಕಣಗಳ,
ಸಾಧ್ಯವಿಲ್ಲ ಎಣಿಸುವುದು ಮಾಂಗಲ್ಯ ಸೂತ್ರದ ಕರಿಮಣಿಗಳ.

- ಡಾ. ಎಂ. ಪಿ. ಉಮಾದೇವಿ, ಮಡಿಕೇರಿ.

# 'ಮನಸ್ಸು'



ಈಮನಸ್ಸೇ ಹೀಗೆ, ಕನ್ನಡಿಯಂತೆ,
ಹರಿಬಿಟ್ಟ ಬಿಂಬವೇ ಇಲ್ಲಿ ಪ್ರತಿಬಿಂಬ,
ಇರುಳಲ್ಲೂ ಬೆಳಕಿನೊಡನೆ ಇಲ್ಲಿದರ ಚೆಲ್ಲಾಟ,
ಅಸ್ಪಷ್ಟ ಚಿತ್ರಗಳಲ್ಲೂ ಬಣ್ಣವಿಲ್ಲದೇ ಚಿತ್ತಾರ!
ಮಬ್ಬು ಕವಿದ ನೆರಳು ಬೆಳಕಿನಾಟದಲಿ,
ಅರ್ಥವಿಲ್ಲದ ರೇಖೆಗಳದೇ ನಲಿದಾಟ !!

ಒಮ್ಮೆ ಒಡೆದರೆ, ಬಿಂಬಕೆ ನೂರಾರು ಪ್ರತಿಬಿಂಬ,
ತರ್ಲಾರದು ಯಾವ ಜೋಡಣೆಯೂ ಏಕತೆ!
ಚಿಕ್ಕ ಚಿಕ್ಕ ಚೂರುಗಳಲ್ಲಿ ಸಾವಿರಾರು ಚಿಂತೆಗಳು,
ಕೋನವಾಗಿ, ಆಯತವಾಗಿ ಬಿದ್ದಿರುವ ಭಾವಗಳು,
ಅರ್ಥವಾದ, ಅರ್ಥವಿಲ್ಲದ ಆಕಾರಗಳಲ್ಲಿ,
ಕಳೆದು ಹೋದವನ್ನು ಹುಡುಕುವುದೇನುಂಟು ಇಲ್ಲಿ !!?!!

ಜಿಡ್ಡು ಹಿಡಿದ ಕನ್ನಡಿ, ಮಬ್ಬು ಕವಿದ ಮನಸ್ಸು,
ರೂಪುಗೊಳ್ಳದೇ ಇಲ್ಲಿ ಎಂದೂ ಈ ಅಪೂರ್ಣ ಚಿತ್ರ ?
ಕಾಯುತ್ತಿದೆ ಮತ್ತೇಕೆ ಸುಡುಬಿಸಿಲಲಿ ನೆರಳಿಗಾಗಿ,
ಪರಿಪೂರ್ಣತೆ ನೀಡಬಲ್ಲ ಕಲಾವಿದನಿಗಾಗಿ,
ಕೊಳೆಯನ್ನು ತೊಡೆದು, ಪಡೆವ ಆಕಾರಕ್ಕಾಗಿ !!?!!

- ಇಂದಿರಾ ಪಿ. ಈ.
ಮಡಿಕೇರಿ.

# ಕೊಡವ ತಕ್ಕ್ ವಿಭಾಗ

# ಎನ್ನ್‌ಂಗ್ ಜೀಂವ ತಂದಿಯ



ಎನ್ನ್‌ಂಗ್ ಜೀಂವ ತಂದಿಯಾ ದೇವ
ನನ್ನೆನ್ನ್‌ಂಗ್ ಪುಟ್ಟ್‌ಚಿಟ್ಟಿಯಾ ?
ಮನ ಮೆಚ್ಚಿತ್ ಬಾವಕಾ
ಜನಕ್ ಬೋಂಡತೆ ಚಾವಕಾ ?

ಕುಂಞಿಯಾಯಿತ್ ಕಳಿಚ
ಕೊಂಞಿ ತಕ್ಕ್ ಪಡಿಚ
ಮಿಂಞಿಕ್ ಮೊಟ್ಟ್‌ಟ್ಟ್ ನಡ್‌ಪಾಸೆ
ಇಂಞಿಂತೆಲ್ಲೊ ಮಾಡುವಾಸೆ

ಎಲ್ಲಿಕೋ ಪೋಪೀಂದ್ ನಾಡವ್ವ
ಇಲ್ಲಿ ಉಳ್ಳಯಿನ ಬುಟ್ಟಿತೇ ಪೋಚಿ
ಎಲ್ಲಿಕ್ ಪೋಯವ್ವಯ್ಯಾಂದ್
ಮೆಲ್ಲೆ ಮೆಲ್ಲೆ ಮೊರ್‌ಟ ಇಂಜಿಲೇ

ಮೊರೆನ ಕೇಪವು ದಾರ್
ಮೊರೆಕ್ ಬಪ್ಪವು ದಾರ್
ಮೊರಡುವ ಎನ್ನ್‌ಂಗ್
ಮೊರೆಲ್ ಎಲ್ಲಾನೋ ಮರ್‌ಪಕ್

ಅವ್ವನಿಲ್ಲತ ಬಾಳ್
ನಾಕಾಚಿ ಗೋಳ್
ಅವ್ವನ್ನುಳ್ಳ ಬಾಳೇ
ಮಕ್ಕಕ್ ಗೋಳಿಲ್ಲತ ಬಾಳ್

ನೀನಿಕ್ಕೆಲ್ಲಿ ಉಳ್ಳಿಯಾ
ನೀನೆನ್ನನೆ ಉಳ್ಳಿಯಾ
ನಾಕರಿವ ಕೈಯ್ಯುಲೆ
ನಾಕರಿಯತದೇ ನಾಡ ಗೋಳ್.

ನೀನೆಲ್ಲಿಯೇಂಗಿರ್
ನೀನಲ್ಲದಾಯಿತೇ ಇರ್
ಗೇನ ಬಪ್ಪಕ ಗೇನ ಪಾಡ್
ನಾ ನೀಡ ಪೋಂಪೋಂದ್

ಅವ್ವಯ್ಯಾಂದ್ ನಾ ಕಾಕುಲೆ
ಅಪ್ಪ ಅವ್ವನಿಲ್ಲತವ ನಾನ್
ಅವ್ವ ನೀನೆಂದೂ ನಾಕಾಯಿತಿರ್
ದೇವಡ ಪೂಜೆಕ್ ಪೂವಾಯಿತಿರ್.

ಅವ್ವನೂ ಇಲ್ಲೆ ಪೊಣ್ಣೂ ಇಲ್ಲೆ
ಮಕ್ಕಳಿಂಜಿತೂ ಫಲ ಇಲ್ಲೆ
ನಾಡವೂಂದ್ ನಾಕ್ ದಾರೂ ಇಲ್ಲೆ
ಇಲ್ಲತವಂಗ್ ಭೂಮಿಲ್ ನೆಲೆ ಎಲ್ಲಿ?

ಎನ್ನ್‌ಂಗ್ ಪುಟ್ಟ್‌ಚಿಟ್ಟಿಯಾ ದೇವ
ನಾ ನಿನ್ನ ಜೀಂವ ಕೇಟನಾ
ಜೀಂವ ತಪ್ಪಂಜಿ ಪುಟ್ಟಿಚಿಟ್ಟವ ನೀನೆ
ಎನ್ನ್‌ಂಗ್ ಪುಟ್ಟ್‌ಚಿಟ್ಟಿಯೇಂದ್ ಎಣ್ಣಿಯಾ?

ಜೀಂವ ತಪ್ಪವನೂ ನೀನೆ
ಜೀಂವ ಕೊಂಡ್ ಪೋಪವನೂ ನೀನೆ
ಜೀಂವ ತಂದ ತಪ್ಪ್‌ಕ್
ಜೀಂವ ಪೋಪಲ್ಲಿಕೆತ್ತನೆ ಕಾಪಾಡ್.

* * * * * * * * * * * *

- ಚೇಂದ್ರಿಮಾಡ ಜಿ. ಮುತ್ತಪ್ಪ
ಕುಶಾಲನಗರ.

# ದುರಾಸೆರ ಫಲ

ಒರ್ ಆಣ್‌ಕ್ ಪತ್ತ್ ಪೊಂಗಳ ಕೆಟ್ಟಿ
ಪತ್ತ್ ಪೊಂಗಕ್ ಪೌಪತ್ತ್ ಮಕ್ಕಳಾಯ್ಚಿ
ನಿಪ್ಪಕ್ ನೆಲೆ ಇಲ್ಲತೆ ನುಗ್ಗಿಬಾತವು ದೇಶಕ್
ಮಣ್ಣ್‌ಕಾಯಿತೆ ಪಡೆಕ್‌ಳ್‌ಂಜಿ ಕಳಂದಂಡತ್
ಜೀವ ದುರಾಸೆರ ಫಲತ್....?

ನಾಕಾಂಡು ಸೀಟ್, ಗೆಲ್ಲಂಡು ನಾನಿಂದ್
ಎಣ್ಣಿ ತೊರ್‌ಂಜತ್, ಹೆಂಡತ್‌ರ ಪೊಳೆ
ಎಡ್‌ತ್ ಚಾಡ್‌ಚಿ, ಪಣತ್‌ರ ಕೆಟ್ಟ್
ಠೇವಣಿ ಇಲ್ಲತೆ ಕಳ್‌ಂದಂಡತ್
ದುರಾಸೆಲ್ ನೇಡ್‌ನ ಕೆಟ್ಟ್ .....!

ಓಟ್‌ನ ಕೇಟ್ ಬಾತಂದ್, ಮನೆಮನೆಕ್,
ಗೆದ್ದ ಪಿಂಞ ಮಾಡ್‌ವಿ, ನಾದೇಶ ಸೇವೆಣ್ಣಿ
ಮಾಡ್‌ಚಿ ದೇಶತ್, ಧೀರನಾಯಕಂಗಡ ಪುಟ್ಟ್‌ನಮ್ಮೆ
ಇದತ್ ಬಾತ್, ಮಿಂಞಕ್ ರಾಜಕಾರಿಣಿರ ಕುಮ್ಮೆ
ದುರಾಸೆಲ್ ಪಡ್‌ಂದತ್ ಕಾಯಿಲತ್‌ರ ನಮ್ಮೆ !

ಮಕ್ಕ ಮಕ್ಕ ಮಾಡುವಾಸೆಲ್, ಬಲ್ಯಂವನಾಂಡು
ಎಣ್ಣುವಾಸೆಲ್, ಒಕ್ಕುವಳ ನೀರ್‌ಕ್ ಕತ್ತಿಕಾಳಗ,
ಬೀಜುವ ಕಾತ್‌ಕ್ ತೋಕ್‌ಕಳಿ, ಅನ್ಯಾಯಕ್
ಪೊಳಿ ಇಟ್ಟ, ಪೊಣ್ಣ್ ಕಳ್‌ಂಪಂಡತ್ ಪಡಿಯನ
ದುರಾಸೆಲ್ ನಡುಬಾಳ್‌ಲ್...?

ಜನಕೊತ್ತೋರ್ಪೆ ಬಂಡ್, ಎಂಗ ಎಣ್ಣುವಾಸೆ ನಿಂದ್,
ಅತಿಯಾಸೆನ ಮರಂದ್, ಪ್ರೀತಿ ಪ್ರೇಮಕ್
ಬೆಲೆ ಬಂದಂದ್, ಪೊಲಂದ್ ಬಪ್ಪ ಬಾಳ್,
ಬೊಳಂದ್ ಬಪ್ಪ ನಂಗಡ ನಾಡ್...!
ಎಲಂಗಿ ನಿಪ್ಪ ಸಂಸ್ಕೃತಿ...!

- ಮೂವೇರ ರೇಖಾ ಪ್ರಕಾಶ್
ಬಲ್ಲಮಾವಟಿ ಗ್ರಾಮ ಪಿಂಞ ಅಂಚೆ, ಕೊಡಗು.

# ಜಡೆ



ಓಹ್! ಆ ಮೊಮ್ಮಂಡ ಜಡೆ ಎಚ್ಚಕ್ ಉದ್ದ
ಪಾಂಬುರನೆಕೆ ನೆಳಿವ ಆ ಜಡೆನೊಮ್ಮ ತೊಡಡಾ.

ನಾಡ ತಕ್ಕ್ ಕೇಟ್ ತಿರಿತೋರ್ ಪೂಂದೆಳಿ ತೆಳ್‌ಚತವ
ಆಹಾ! ಎನ್ನೇಂಗಾಡ್ ತೆಳಿಲೇ ಒಪ್ಪಿಗೆ ತಾತವ.

ಆ ಬರಿ ಈ ಬರಿ ಬೆಂಬರಿಕೊಮ್ಮ ತಿರಿ ನೋಟ್‌ನ
ಮೆಲ್ಲೆ ಮೆಲ್ಲೆ ಮೊಟ್ಟ್‌ಟ್ಟ್ ಅವಕಾಯಿ ನಾ ಪಾಡ್‌ನ.

। ಓ ಮೊಮ್ಮ ನೀಡ ಜಡೆ ಎಚ್ಚ ಚಾಯಿ ।
॥ ನೋಟ್ಯಂಡೇ ನಿಂದ, ನಾನಿಲ್ಲಿ ಬೆರಗಾಯಿ ॥
। ಜೂಂಗಿ ಕಳಿಪ ನೋಟದ್ ಕರ್ತ ಕೇರೆಯಾಯಿ ।
॥ ನಾ ಮರ್‌ಳಾನ ನೀಡ, ಈ ಉದ್ದ ಜಡೆಕಾಯಿ ॥

ಅವಳೊಪ್ಪ್‌ಚಿಟ್ಟತ್ ನಾಡ ಪಾಟ್‌ಕ್ ಧನ್ಯವಾದ
ಆ ಕೋಗಿಲೆ ಸ್ವರತ್ರ ಬಲೆಲ್ ನಾಕೆಣಿಂಜಿ ಬುದ್ದ,

ಧೈರ್ಯ ಮಾಡಿತ್ ಜಡೆನ ಕೈಲೆಡ್‌ತ್ ಪುಡ್‌ಚ
ಉದ್ದ ಜಡೆರ ಪ್ರೇಮಿ ನಾನಾನ ಒರ್‌ತರ ಪುಚ್ಚ.

ಚಂದೋಳತ್ ನೆಜ್ಜ ಜಡೆನ ಅಂಗೈ ತೊರಂದ್ ಪುಡ್‌ಚ
ಪ್ರೀತಿಲ್, ಪ್ರೇಮತ್ ಜಡೆನ ಮನಸಾರೆ ಕೊದ್‌ಚ.

ಛೀ! ಬುಡ್...ಂದ್ ಅವ ಮಿಂಞಕ್ ತೆರಂಗ್‌ಚಿ
ಅಯ್ಯೋ; ಪೋಯಿರುವಲ್ಲಾಂದ್ ಪೋಡಿಲ್ ನಾಡ ಕೈ ಮುರ್‌ಂಗ್‌ಚಿ

ಜೋರ್ ಬಲ್‌ಚಕೋ ಅವ ಕೂತ್‌ಟ್ಟ್‌ಲೆಲ್ಲಾಂದ್ ಎಚ್ಚರಾನ
ಮಂಡೆ ನೇತಿ ನೋಟುವದು ನಾ ಬೆರಗಾಯಿ ನಿಂದ್ ಪೋನ.

ಜಡೆನ ನಾಡ ಕೈಲ್‌ಟ್ಟ್ ಕೊಟ್ಟ ಮಂಡೆಲ್ ಪೋಪವಳ ಕಂಡ್ ನಾ ಮಂಡೆತಿರಿ ಬುದ್ದ.
ಈ ಕಥೆ ಕೇಟ ಕೂಟ್‌ಕಾರ ಹಂಗ್‌ಚಿಟ್ಟತ್ ಏ ನೀನೆಂತಾ ಪೆದ್ದ...!

**- ಚೆಟ್ಟಂಗಡ ರವಿ ಸುಬ್ಬಯ್ಯ**
ವೆಸ್ಟ್ ನೆಮ್ಮಲೆ ಗ್ರಾಮ ಪಿಂಞ ಅಂಚೆ.

# ಆತ್ಮ ಬಿಕ್ಕ್‌ಚಿ.....!



ಕೊದಿಮುತ್ತ್‌ಲೆದೆಪಾಲ್ ತಪ್ಪವ್ವ!!
ಎದೆಕೊತ್ತಿ ಜುವ್ವ ಪಾಟ್‌ರಪ್ಪ
ಬೊಗ್‌ಡ್‌ಕತೆ, ಉರ್ಕ್‌ನ್ನೆ, ಬಂದ ಪೂಗೆರ ತಾಯಿ
ಒಡಿಕತ್ತಿ, ಬೋಟೆ ಬೊಡಿ, ಪಡೆವೀರನಜ್ಜ....!
ಇಂಜಕಲೂ, ನಾ ಮೊರ್‌ಟ!
ಕ್‌ಟ್ಟ್‌ನಾಲೆ ಓಡುವಕ್ ಪೊರ್‌ಟ
ಕಂಡಾನ ಬಾಯಿರೊಳ್‌ಕ್‌ಟ್ಟ
ನಾ ಬೊಳಿಯಂಡೂಂದ್! ನಾ ಬೊಳ್‌ಂದ....
ಕುಂಞಿತನ ಬುಟ್ಟ್, ಬಾಲೆಯಕ್ ನಡ್‌ಂದ!!

ಬಂಗಾಡ್ ಬನ ಮಧ್ಯ
ನೀಲಕೆರೆ ನೀರ್ ಮಧ್ಯ
ಮಂಡೆಡ್‌ತ ಕೊಳಕಂಡೆ ಕಾಂಬದದೇ ಸ್ವರ್ಗ
ನಾ ಕಂಡ, ಬಾಲೆಯತ್!
ಮಿಂಚ್ ಕಣ್ಣ್‌ರ ಬೊಳಿಕ್
ಕರ್ತ ಬಾವೂ ಎಲಂಗಿ,
ಮುರ್ಕ ತಡಿರ ಬಲಕ್
ಉರ್ತ ಮಾರಿಯಾಳಡಂಗಿ,
ಬಿಸಿ ಚೋರೆರಾ ಯದಕ್
ಕೈಪಕೆಯು ಪೈಪಡಕಿ,
ಪುಡ್‌ತ ಇಲ್ಲತ ಮನಕ್
ಅತ್ತಿ ಪೂ ಕೊದಿಯಾಯಿ,
ಬಯತಂಗಳ ಚದ್‌ಚ
ಬಡವಂಗಳ ಬಡ್‌ಚ
ಅನ್ಯಾಯತ್‌ನ ಕೊದ್‌ಚ
ನಾ ಬೊಳಿಯಂಡೂಂದ್ ನಾ ಬೊಳ್‌ಂದ.....
ಬಾಲೆಯತ್‌ನ ಬುಟ್ಟ್, ಎಡೆಬಯತ್‌ಕ್ ನಡ್‌ಂದ!!

ಕೈ ಪುಡ್‌ಚಯಿಂಗ್ ಎದೆ ಕೊಡ್‌ತ್
ಕೂಡ್ ಬದ್‌ಕ್‌ರ ಚೋದ್,
ನಯಿಚಿ-ಕಳ್‌ಚಿ ಪಡೆ ಪೊತ್ತ್
ಏಳಿಗೆಕ್ ಬಟ್ಟೇದ್,
ಮಕ್ಕ ಮರಿನ ಕೊದ್‌ಚಿ ಕೊಂಡಾಡಿತ್

ನಾಲ್ ದಿನತ್‌ರ ಬಾಳಿದ್,
ಕೆಟ್ಟ ಬಲ್ಯರಿಕೆಕಾಯಿತ್
ಒಳ ಬಟ್ಟೆ, ಏದೇದ್?
ಪೆತ್ತಯಿನ ಪಡೆಲಾಕಿ,
ಸಮಾಜ ಸೇವೆನ ಕಡೆಲಾಕಿ,
ಗೌಜಿ ಗದ್ದಳ ಎದೆಲಾಕಿ,
ಸಂಸಾರ ಸುಗತ್‌ನ ತೊಡೆಲಾಕಿ
ನಾ ಬೊಳಿಯಂಡೊಂದ್! ನಾ ಬೊಳ್‌ಂದ......
ಎಡೆ ಬಯತ್‌ನ ಬುಟ್ಟ್, ಬಯತ್ ಕಾಲಕ್ ನಡ್‌ಂದ||

ಮಂಗ್‌ನ ಕಣ್ಣ್‌ಕ್ ಕುಪ್ಪಿರ ತಟ್ಟ್
ಬೊಚ್ಚ್ ಬಾಯಿಕ್ ಕೊಯಿತ ಕೋರೆ
ತೊಂಡ ಬದ್‌ಕ್‌ಕ್ ತಂಡ್ ತೊಣೆಕಾರ
ಪೊನ್ನ್, ಪಣ, ಆಸ್ತಿ, ಮಕ್ಕ ಪಾಲಾಚಿ
ಚಾಯಿ ಬೋಜ ಶಕ್ತಿ ಮಾಂಜಿಯೇ ಪೋಚಿ
ಬೋಳ್ ಬದ್‌ಕ್‌ರ ಚಾಯಿ ಮದಿಯಪ್ಪಾಂದಾಚಿ
ಅಕ್ಕಣೆಕ್ ನನ್ನ ಯಮ ಕೊಂಡೋಚಿ......!

ಸ್ವರ್ಗ-ನರಕತ್‌ರ ಕೆಂವ ತಿರ್‌ಚ
ಬಲ್ಯ ಮನೆ ಒಂದೆ!! ಪಡಿ ಮಾತ್ರ ದಂಡ್
ನೇಮ ಪೋಲೆ ಚಿತ್ರಗುಪ್ತಂಡ
ಪಾಪ ಕರ್ಮತ್‌ರ ಪಟ್ಟಿ ಓದಲ್‌ಕ್
ದೇವಂಡಾ....... ಕೂತ್!
ನಾ ತಂದ, ಕೈಕಾಲ್ ಮಂಡೆಲ್
ಕಣ್ಣ್, ಕೆಮಿ, ಬಾಯಿಲ್
ಚೋರೆ, ನೀರ್, ತಡಿಲ್
ಭೂ ಲೋಕತ್ ನೀಡ ನೈಪೆನ್ನೆಣ್ಣ್....!

ನಾಡಾತ್ಮ ಬಿಕ್ಕ್‌ಚಿ... ನ ...... ನ್ನ..... ನ್ನಾ.....
ನಾ ಬೊಳ್‌ಂದ, ನಾ ಬೊಳ್‌ಂದ, ನಾ ಬೊಳ್‌ಂದ!

ನರಕತ್‌ರ ಪಡಿ ತೊರಂದ್
ದೇವನುಂಡ್‌ಚಿ ನನ್ನ ಚೆಡಿಗೊಂಡ್
ಈ ಬದ್‌ಕ್‌ಕ್....!
ಸಮಾಜ ಶೋಷಣೆಲ್ ಪಣ್ಣಾಪ||
ಈ ಪೊಣ್ಣ್ ಬದ್‌ಕ್‌ಕ್!

- ಉಳ್ಳಿಯಡ ಡಾಟಿ ಪೂವಯ್ಯ,
ಮಡಿಕೇರಿ

# 'ಕಷ್ಟ ಬಂದಾಕ'



ಮೊರಡತೇ ... ನೀ ಮೊರಡತೇ
ಕಷ್ಟಾಂದ್ ನೀ ಮೊರಡತೇ,
ಕಷ್ಟಕ್ಕೊರ್ ಸುಖ ನೀಕುಂಡ್
ಮೊರಡತೇ ... ನೀ ಮೊರಡತೇ !


ಚೂರಾನ ಬದ್‌ಕ್ ನೀ ಗೇನ ಮಾಡತೆ,
ದೂರ ನಿಂದ ಬೆಂದುನ ನೀ ತೇಡತೆ,
ಕಷ್ಟಕಿಲ್ಲತ ಬೆಂದು ಚಾಚೆ, ನೆರೆಕರೆ
ಕರಿ ಮಾಡತ ಪೀರೆಕ್ಕಿರ ಪೋಲೆ !

ದುಃಖ ಬೋಂಡ ಭಕ್ತಿ ಬೋಂಡು, ಪ್ರೀತಿ ಇರಡ್ ಬಾಳ್‌ಕ್,
ಅಭಿಮಾನ ಪುರ್‌ಡ್ ಇರಡ್ ಬದ್‌ಕ್‌ಲ್
ಬಾಯಾರ್‌ನ ಭೂಮಿ ಇಂದ್ ಬೋಡ್‌ವದ್ ಮಳೆನ
ಬತ್ತಿಪೋನ ಎದೆಲ್ಲೆಲ್ಲಾ ಮರ್‌ಂದ್‌ಪೋಯಿತ್ ನಾಳೆನ ||
ಭರವಸೆರ ಬದ್‌ಕ್‌ಲ್ ಬಾಳ್‌ನೊಮ್ಮ ದೂಡಂಡು
ಪುಟ್ಟ್‌ಚಿಟ್ಟ ಅಪ್ಪಅವ್ವ ಕಾಂಗತಾಯಿತ್ ಕಣ್ಣ್‌ಂಜಿ
ಕೊಡಿಲ್ ಅಳ್‌ತ ಇಗ್ಗುತ್ತಪ್ಪ ಕೂಳ್ ತಪ್ಪ ಬಟ್ಟೆಕ್ !

ಎಣ್ಣೆ ತ್‌ಂದ ಬೊಳ್‌ಚತ್
ಧರ್ಮತ್ ಎಣ್ಣೆನ ಬೂಕನ
ಅಸತ್ಯ ತಿರಿ ಕರ್‌ಂಜಿತ್ ಸತ್ಯ ತಿರಿನ ಕತ್ತ್‌ಚಿಡನ
ತಿರಿ ತಿದ್ದಿತ್ ಬೊಳಿ ಬಂದಿತ್ ಬಾಳ್ ಬದ್‌ಕ್ ನೀಸನ
ಪೂ ಬಳ್ಳಿ ಪಬ್ಬ್‌ನನಕ್ಕೆ, ಮರತ್ ಪಣ್ಣ್ ಕೊಯಿತನ್ನಕೆ
ಮೊರಡ್‌ವ ಮನಸ್ಸ್ ತೆಳಿಚಿತೊಮ್ಮ ಬಾಳೊಂಡು !

- ನಾಯಕಂಡ ಬೇಬಿ ಚಿಣ್ಣಪ್ಪ
ಕೆ. ಬೋಯಿಕೇರಿ, ವೀರಾಜಪೇಟೆ.

# ಕವಿ ಬಾಳ್



ಮನತೊಳ್‌ಂಜ ಪೊರ ಬಂದ್
ಕವನ ರೂಪೆಡ್‌ತ್ ನಿಂದ್
ಕ್‌ರ್‌ತೊಂಡೆಲ್ ಸ್ವರ ಮೊಳಂದ್
ಎದೆ ಗ್‌ಡ್‌ತ್ ಪೊಂದಲ್ ನೇಂದ್
ಸ್ವರ ಮೊಳಂದ ದಿಕ್ಕ್‌ಲ್ ಆಲ್‌ಚಿಟ್ಟ್‌ನಿಂದ್
ಕವನ ರೂಪಕ್ ಮರ್‌ಳಾಯಿ ಬಕ್ಕಡ್
ಬಾವ ಬಟ್ಟೆಕ್ ಬೊಳಿಯಾಕಡ್....!

ಇರ್ ಪೊಲಂದ್ ನೇರ ಬೈಟಾಕಣೆ
ಜಗದುಂಬಾ ಕಣ್ಣ್, ಕೆಮಿಕ್
ಕಂಡ್, ಕೇಟಾಂಗ್ ಬೊರ್‌ಂಡತೆ
ಬೇರಗೊಂಡ್ ತುರ್‌ಂಡಿ ನಿಕ್ಕತೆ
ಮನನೊಂದ್ ದಾತ್ ಕಳ್‌ಂದವತೆ
ಮನ ಶಕ್ತಿನ ಮೊನೆಕೂಟಿ ನಿಂದ್
ಮಾನವ ಬದ್‌ಕ್‌ನ ಚಾಯಿಕೂಟನಾ.... !

ಚುಳಿ ಪಿಲ್ಲ್ ಮೀದ ಪೂಮಂಜಿ ಮಣಿಕ್
ಸೂರ್ಯಂಡ ಪೊಂಗಿರಣ ಬುದ್ದ್ ಮಾಂಜೋಲೆ
ಮಾಲೋಕತ್ ನಡ್‌ಪ ಬಂಗ ಕಾರ್ಯತ್‌ನ
ಬುದ್ಧಿಗೊಂಡ್ ತಿದ್ದಿ ಬಂದ್ ನೀತಿ ಸಾರಿತ್
ಕವಿತ್ವಗೊಂಡ್ ಕವನ ರೂಪತ್ ಪೊರಬಂದ್
ಮಾಜನಡ ಮನಗೆದ್ದ್ ಈ ಲೋಕತೇ ಬಾವನಾ
ಸಾರ್ಥಕ ಕವಿ ನಂಗಳಾಯಿ ಒಂದಾಯಿ ಬಾವನಾ....?

- ಬೊಟ್ಟೋಳಂಡ ಮಿಟ್ಟು ಪೂಣಚ್ಚ,
ಪೇರೂರು ಗ್ರಾಮ, ಬಲ್ಲಮಾವಟಿ ಅಂಚೆ, ದ. ಕೊಡಗು.

# ಬಿಚ್ಚ್ಯಾರ್ ತಿಂಗತ್ ಕೊಡಗ್ !

ಬಿಚ್ಚ್ಯಾರ್ ತಿಂಗತ್‌ರ ಪಾನೆಲ್‌ಚಿ ಚಾಯಿ
ಕೇಕ್ ದಿಕ್ಕ್‌ಲ್ ಉದ್‌ಚಿ ಬಪ್ಪ ನೆಲ್‌ಚಿ
ಅಲ್ಲಲ್ಲಿ ... ಅಲ್ಲಲ್ಲಿ...

ಕರ್‌ತಾಕಾಶತ್, ದೂರದೂರತ್
ಮಿನ್ನುವ ನಕ್ಷತ್ರ ನೋಟುವಕೇ ಚಾಯಿ!

ತಂಪಾನ ಕುಳ್‌ರ್‌ಗಾಳಿ ಬೀಜುವಕ
ಬೊಳ್‌ತ ಪಚ್ಚಡ ಬಿರ್‌ಚನ್ನೆಕೆ ಕಾಂಬಕ
ಆ ಮಂಜಿ ಮೋಡ, ಎಂತಾ ಚಾಯಿ!
ಓಡೋಡಿ... ಓಡೋಡಿ...

ಪುತ್ತರಿ ನಮ್ಮೆ ಬಪ್ಪದ್ ಚಾಯಿ
ಬಿಚ್ಚ್ಯಾರ್ ತಿಂಗತ್ ಅಯ್ಯಪ್ಪ ದೇವಡ
ಧಾರೆ ಊಟ ಉಂಬದೂ ಒರ್ ಚಾಯಿ!

ಕೋಲ್ ಬಾಣೆಲ್ ಕೊಡವ ಬಂಬಂಗಡ
ಪರಿಯಕಳಿ ಕೊಟ್ಟ್ ಪಾಟ್ ಆಟ್
ಸುತ್ತಿ ಸುತ್ತಿ..... ಸುತ್ತಿಸುತ್ತಿ....

ಕಾಲೆಡ್‌ತ್ ಆಡುವ, ಆಡಿಯಂಡ್
ಕೋಲ್ ಪೊಯ್ಯುವ, ಕೋಲಾಟವೇ ಚಾಯಿ!

ಬಿಚ್ಚ್ಯಾರ್ ಪೋಯಿತ್, ಧಲ್ಮ್ಯಾರ್ ಬಪ್ಪಕ
ಆಂಗಿ ಜೂಂಗಿ ಕಳಿಪ ನೆಲ್ಲ್‌ರ ತೆಳಿಯೂ
ಮಂಜ - ಚೋಪು, ಚೋಪುಕಪ್ಪು
ರಂಗ್‌ರ ಕಾಫಿ ಪಣ್ಣ್‌ನ
ಎಲ್ಲೆಲ್ಲಿಯೂ... ಎಲ್ಲೆಲ್ಲಿಯೂ...
ನೋಟುವಕಂತೂ ಇಂಜೂ ಚಾಯಿ!

- ಐನಂಡ ಎಂ. ಧನು
ಬಿಳುಗುಂದ ಅಂಚೆ, ಅಮ್ಮತ್ತಿ.

# ಕೋರಿಕೆ




ಎಣ್ಣ್ ಕಾವೇರಿ... ನಾ ಪೂವಾಕಡಾ... ?
ನೀಡ ಪೂಜೆಕ್... ನಾ ಮುಡಿಪಾಕಡಾ...?
ಎನ್ನ್‌ಂಗೋ ನಿನ್ನ ತುದಿಪ ಆಸೆ ಬಂದಿತ್.
ಎಣ್ಣ್ ದೇವಿಯೇ... ನೀರಾಕಡಾ...
ಅಭಿಷೇಕಕ್... ಪರಿಯಡಾ...?
ಇಂದೆನ್ನೊ ನಿನ್ನ ತುದಿಪೊ ಆಸೆ ದುಂಬಿತ್
ಎಣ್ಣಮ್ಮಾ ದೇವಿ ಮರಗಿಡವಾಯಿ
ಚಾಮರ ಬೀಜಡಾ...?
ಕುಂದಾಯಿ ನಿಂದ್ ಧ್ಯಾನ ಮಾಡಡಾ...?
ಕೋಗಿಲೆಯಾಯಿ ತುದ್‌ಚೀ ಪಾಡಡಾ...||ಎಣ್ಣ್||

ಕುಳ್‌ರ್‌ಗ್ಗಾಳಿ ತ್‌ಂಡಿ ಬೀಜಿಯೆಂಡ್
ನೀಡ ಗುಣತ್‌ನ ಪಾಡುವಕ್
ಬಾನತ್ತ್ ಮೋಡ ತೇಲಿಯೆಂಡ್
ನೀಡ ಚರಿತ್ರೆನಾ ಸಾರುವಕ
ಆಹಾ.... ನೀಡ ಮಹಿಮೆನರಿಂಜ್ಜಿ
ಮನತಿಂದ್ ಭಕ್ತಿ ಉದಿಚಿ
ನಿಂದನಾ ನಾಡೆದೆರಾ ಗುಡಿ ತೊರಂದ್ ||ಎಣ್ಣ್||

ಪೊಮ್ಮಾಲೇ ಈ ಕೊಡಗ್‌ಲ್
ಪಚ್ಚೆ ಪಟ್ಟುಡ್‌ತ್ ನಿನ್ನ ಕಾಂಬಕ
ಕಲ್ಲ್ ಕಾವೇರಿ ಪಿಲ್ಲ್ ಭೂಮಿಲ್
ನಾ ಜನ್ಮ ಪಡಂದದೇ ಸಾರ್ಥಕ
ಆಹಾ.... ನೀಡ ಈ ಚಾಯಿ ಕಂಡ್
ಮನಸ್ಸ್ ಪುದ್‌ಕಗೊಂಡ್
ಪುಡ್‌ತಾ ತಪ್ಪಿಯೆಂಡುಂಡ್... ಎನ್ನ್‌ಂಗೊ... ||ಎಣ್ಣ್||

- ಪಾಲೆರ ರಾಣಿ ಅಪ್ಪಣ್ಣ
ಪೇರೂರ್ ಗ್ರಾಮ, ಬಲ್ಲಮಾವಟಿ ಅಂಚೆ - 571 214

# ಈಶ್ವರಂಡ ಆಟ್



ಕರವಟ್ಟಿರ ಬಿ. ಅಯ್ಯಣ್ಣ

ಆಡ್ ಬಾ ಈಶ್ವರ ಈ ಜಮ್ಮ ಕೊಡಗ್‌ಲ್
ಆಡ್ ಬಾ ಈ ನೀಡ ಕ್‌ಭೂಮಿಲ್
ಆಡ್ ಬಾ ಈ ಕಾವೇರಿ ಮಣ್ಣ್‌ಲ್
ಆಡ್ ಬಾ ಈ ಪೊಮ್ಮಾಲೆ ಕೊಡಗ್‌ಲ್

ನೀಡ ಆಟ್‌ಕ್ ತಕ್ಕ ಕೈತಾಳ ಇಡುವ ಜನ
ನೀಡ ಸತ್ಯಕ್ ಮೆಚ್ಚಿ ಮರುಳಾಚಿ ಈ ಜನ
ನೀಡ ಆಟ್‌ನ ಕಂಡ್ ಬೆರಗಾನ ಈ ಜನ
ನೀಡ ಯುಕ್ತಿನ ಕಂಡ್ ಕೊದಿಯಾನ ಈ ಜನ.

ನೀಡ ಈ ಆಟ್‌ಕ್ ಕುಂದೋಳ ಕುಲುಂಗುವ
ನೀಡ ಆಟ್‌ಕ್ ತೆಡ್‌ಮಳೆಯು ತಾನಾಪ
ನೀಡ ಈ ಶಕ್ತಿಲ್ ಮಳೆಬೊಳೆಯು ಚಾಯಾಪ
ನಿನ್ನಂಡ್ ನಂಗಡ ಕುಕ್ಕುಮ್ಮೆಕ್ ಕೂಳಾಪ
ನೀನೇ ಶಿವಾ... ನಂಗಡ ಮಾಧೇವ.

ನೀಡ ಈ ಆಟ್‌ಕ್ ಕ್‌ಬ್ಭೂಮಿ ಗುಡ್‌ಂದೋಕು
ಜಭ್ಭೂಮಿ ಪಾತಾಳಕ್ ತಾಂದೋಕು
ನೀಡ ಕಾಲಡಿಕ್ ಕ್‌ಟ್ಟ್‌ನವು
ಮಣ್ಣ್‌ಲ್ ಮಣ್ಣಾಯಿ ಪೋಕು

ಮದಿ ಮಾಡ್ ಓ ಶಿವಾ ಅದಿಯಾಚಿ ಈ ಆಟ್
ಲೋಕ ಅಳಿಯುವ ಜೋಕೆ ಈ ನೀಡ ಆಟ್‌ಕ್,
ಇರಡ್ ಇಂಞೂ ಚಿರಕಾಲ ಈ ಕೊಡಗ್
ಬರಡ್ ಜನಕೆಲ್ಲ ಕಾಲಭೈರವನ ತುದಿಪ ಪುರ್‌ಡ್.
ಆಡ್ ಬಾ ಈಶ್ವರ ಈ ಜಮ್ಮ ಕೊಡಗ್‌ಲ್ !

- ಕರವಟ್ಟಿರ ಬಿ. ಅಯ್ಯಣ್ಣ
ಪಾಲಿಬೆಟ್ಟ, ಕೊಡಗು.

# ನೀನ್ ಎಣ್ಣೋಲಿಂಜತ್

ನೀನ್ ಪ್ರೀತಿಲ್ ಎಣ್ಣೋಲಿಂಜತ್
ಪೊಲಾಕ ತಿಂಡಿ ತಿಂದಂಡ್
ಎಚ್ಚಕ್ ಚಾಯುಂಡ್
ನೀಡ ಕೈ ಮಾಡ್‌ನ ಅಡಿಗೆ !

ನೀನ್ ಪ್ರೀತಿಲ್ ಎಣ್ಣೋಲಿಂಜತ್
ಕೆಲಸಕ್ ಪೊರಟ್ ನಿಂದಿತ್
ಆಫೀಸ್‌ರ ಫೈಲ್‌ರ ಮಧ್ಯತ್‌ಲ್
ನಾನೆನ್ನನೆ ಸಮಯ ಕಳೆಯಡ್ !

ನೀನ್ ಪ್ರೀತಿಲ್ ಎಣ್ಣೋಲಿಂಜತ್
ಬೈಟಾಪಕ ಮನೆಕ್ ಬಂದದು
ದಿನ ಪೂರ್ತಿ ಮನಸ್ಸೆಲ್ಲ
ನೀಡ ಪಕ್ಕಲೇ ಇಂಜತ್ ಫೈಲ್‌ನ ಬುಟ್ಟಿತ್ !

ನೀನ್ ಪ್ರೀತಿಲ್ ಎಣ್ಣೋಲಿಂಜತ್
ಬೈಟ್ ಬುದ್ದೋಕ್ ಮಿಂಞ
ಕೆಜ್ಜಿತ್ ಚೋತಿಯರೆ
ಮದಿ ನೀನಾಡ ಬಂಧಿ !

ನೀನ್ ಎಂತದೂ ಎಣ್ಣತೋಚೇಂಗಿಯೂ
ನಾಕ್ ಬೇಜಾರ ಇಲ್ಲೆ,
ಆಚೆಂಗಿ.......
ತಕ್ಕಿಲ್ಲತೆ ತಡವಾಯಿತ್ ಬಪ್ಪಾನ
ನಾನೆನ್ನ ಸಹಿಸಡ್ ?

- ಎ. ಪ್ರಮೀಳ ಕರುಂಬಯ್ಯ (ಅಜ್ಜಮಾಡ)
ಮಡಿಕೇರಿ - ಕೊಡಗು.

# ಇತರ ಭಾಷಾ ವಿಭಾಗ

# The Foolish Worldly Gaiety



This world is just like a stage,
Each one building up his own image,
Some peaceful and some in sage,
Each one being paid his wage.

Everything here is for show,
Your life's seeds, you sow ;
Each one here is each one's for,
Some treated high and some low.

Each one thinks himself great,
Pride increasing at a great rate;
Nobody tries to see & wait,
For god opens the heaven's gate.

Life on Earth is just temporary,
Filled with joys as well as misery :
Nothing remains always in memory,
Neither failure nor victory.

Let us leave all this show-of fun,
For life is not a long run ;
And try to find out the reason,
Behind one life in this creation.

LET US MAKE THE WORLD A
BETTER PLACE TO LIVE IN.

*- Niveditha Shetty B.K., Madikeri.*

# THE SCIENCE CONCEPT

WHAT IS SCIENCE ?

Science endeavours to study through observations,
By collections of data, experimentation and results;
Science is phenomena in na[redacted]orating natural happenings,
And explains them in terms of definite principles and laws;
Science upholds matter and external phenomena is ultimate reality,
But, concept of reason and sense perception as the only reliable faculties,
Science throws light on 'What is' but not on, 'What should be',
By its theories and laws which are filled with partial knowledge;

WHAT SCIENCE HAS MADE?

Science his made all spirituality and idealism to be totally extinct
Making lust and greed the male and female deities to adore;
Science has made money as the priest; fraud and corruption, its comrades,
Sacrificing human souls pitilessly for the sake of the selfish mottos;
Science has made life to expand beyond the wildest dreams,
Naming the present era as space-age, jet-age and computer-age;
Science has raised hopes about building a far better world order,
Full of dangers, whose sources are in the very achievements of science;
Science has made powerful countries to vie with one another,
Imposing their own ideologies through persuasion or aggression;
Science has made countries to lie under the shadow of internal revolts ,
With external aggression and to pile up nuclear weapons of warfare;
Science has made the war clouds thunder in some part or the other,
By the sound of threat of world conflagration every moment;
Science has shaken emotional complex and psychic anxiety,
Frustration taking the place of optimism and self-confidence;

Science has made hope, cheer and joy rare commodities in life,
Filling the growing void with cheap entertainment, crime & violence;
Science has stolen away affection, love, service and sacrifice,
And thus discord, disharmony and disobeyance taken their place;
Science has set nations with political strife and economic exploitation,
Letting dishonesty, corruption and crime in most fields of social activity;
Science has made everyone wonder what is in store for humanity,
For, lives have been flooded with distrust, hatred and violence;
Science today, as its net results and data, made the world to be,
In the grip of a supreme moral, ethical and spiritual crisis;

WHAT SCIENCE MUST DO?

Science must sharpen Man's intellect by making him aware,
The facts of his weakness & strength, his failure & triumph;
.Science must contribute to the building of a better world,
Without destroying the one on which we all have to stand;
Science must kindle the light of the Truth in the hearts,
With the fact that self-less expansion is spirituality in life ;
Science must also spread the message to the hearts,
That self-contraction in utter materialism is death ;

LASTLY,

Science must walk hand in hand with Self-realization,
To fill lives with eternal love, light and joy of the Creator.



Mrs. K. Prashanthi Pooviah
Virajpet.

# TAKE A GUESS

Who do you think this merry round
Man could be ?
His bed was soft and white,
Surrounded by a frame work of brown,
Who went to bed the whole day with never a frown
Whose round cushiony pillow
Was embroidered with beads
And whose blanket was
With great circles,
Figuring out how many circles
Are there, is itself sometime a puzzle.
This fellow is sometimes cool
But often peppery.
Sometimes kind, but usually
Rude and salty
Packing your brains ?
Well I'll tell you
It is the sandwich that has all
This time been in the lime light,
Yes, your eyes have read right!
The jolly fellow is the slice of Cucumber,
Whose bed is bread
Whose cushiony pillow is the tomato
Whose blanket is the Onion
This jolly fellow, along with
his accessories
Was alive on this earth
And on my plate, a few
Seconds ago!



- ***Vikram Thimmanna. T.***
Gonicoppa.

# ಕೆಮಿ ಮಾತ್

ಎದ್ ಬಾ, ನೀ ನುಗ್ಗಿ ಬಾ, ನೀ ಗೆದ್ ಬಾ
ಎದೆ ತಟ್ಟಿ, ಭುಜ ತಟ್ಟಿ ಮುನ್ನುಗ್ಗಿ ಬಾ
ಭುಜಕ್ಕೆ ಭುಜಕೊಟ್, ಹೆಗ್ಲ್‌ಗೆ ಹೆಗ್ಲ್ ಕೊಟ್ - ತಲೆ ಎತ್ತಿ ನೀ ಬಾ
ನಡೆವಲ್ಲಿ ನಡ್ದ್, ಈಜುವಲ್ಲಿ ಈಜಿ ನೀ ದಡ ಸೇರ್ ಬಾ

ಕೊಟ್ ತಿಂಬೊಕುತ ಚಾಂಪ ಹೇಳ್ದ ಮಾತ್
ಜಗಳ ಒಳ್ಳದಲ್ಲಾತ ಚಾಮೆವ್ವ ನುಡ್ದ ನುಡಿ
ನಿತ್ಯ ಸತ್ಯತೇಳುದರ ನೀ ಮರಿಬ್ಯಾಡ

ದೀಪಂದ ದೀಪ ಹೊತ್ತಿರೆ ಹೊತ್ತಿಸಿದ ದೀಪ ಮಂಕಾದುಲೆ
ನೀ ದುಡ್ದ್ ಪಡ್ದರ ಹಣ ಸಮಾಜಕ್ಕೂ ಕೊಟ್ಟರೆ ನಿನ್ನ ಭಾಗ್ಯ ಕಮ್ಮಿ ಆದುಲೆ
ಕೊಟ್ಟದುಟ್ಟಲೆ ಅದ್ ನಿಂಗೇ
ಕೊಡದೆ ಇದ್ದದ್ ಇನ್ನಾರಿಗೋಂತೇಳುವ ಮಾತ್‌ನ ಗ್ಯಾನ ಇಸಿಕಾ
ದ್ವೇಷ ರೋಷಂತೇಳಿಕಂಡಿದ್ದರೆ ಕಡೆಗಾದು ಸರ್ವನಾಶ


ಯಾರ್ನೇ ನೋಡು ನೀ ಅವ್ ಸಪ್ಪೆ ಆಗೊಳೊ
ಯಾರ್ನೇ ಕೇಳ್ ನೀ ಅವ್ ಅಯ್ಯೋಂತೇಳಿವೆ
ಯಾರ್ನೇ ಕರಿ ನೀ ಅವ್ ತಲೆ ಎತ್ತಿ ನೋಡ್ದುಲೆ
ಹಿಂಗ್ಯಾಕೆತ ನೀವ್ ಹೇಳುವರಿಯಾ?

ಊರ್ ಹೋಗೂಂತೇಳಕನ
ಕಾಡ್ ಬಾತ ಕರೆಕನ
ನೀ ಎಂತನ ಬುಟ್ ಹೋದಿಯಾ?
ಆಸ್ತಿ? ಹಣ? ಬಂಗ್ಲೆ? ಕಾರ್? - ಥೂ ! ಅದಲ್ಲಾ
ಮತ್ತೆಂತನಾಂತ ನೀವ್ ಹೇಳುವರಿಯಾ?

ಫ್ಯಾನ್ ಬಾತ್, ಫೋನ್ ಬಾತ್,
ಟಿ. ವಿ. ಬಾತ್, ಕಂಪ್ಯೂಟರ್ ಬಾತ್ - ಇಂಪ್ಯೂಟರ್ ಬಾತ್
ಅದ್ದಾ! ಕರೆಂಟ್ ಬಂದ್ ಹೋತು!
ಭಾರೀ ಭಾರೀ ಬದಲಾವಣೆಂತೇಳಿ ಹಳ್ಳಿಗೆ ಕೊಳ್ಳಿ ಮಡ್ಗಿ ಆತ್.

- ಬಾರಿಯಂಡ ಆರ್. ಜೋಯಪ್ಪ, ಮದೆ.

# "ಓರ್ಮತ್ತೆಟ್ಟ್"



ವರರುಚಿ ಮದಕರ ಭಾವಂ ಚೂಡಿ
ಪುಳಿಪುದು ಮಧುರ ತೇನ್ ತುಳ್ಳಿಕಳಾಯ್
ನೀಕುಂಭಜಳ್ ನೀಳೆ ಕಾಟಿಲ್
ಇಳಕ್ಕಿತುಳ್ಳಿ ಇರಂಬಿ ಮರಿಜು
ಚೆಡಿತನ್ ಪುಳಕ ಪೂಂಕಣಿ ಪೋಲೆ
ಮಕರ ಕಾಟಿಲ್ ಪುಡವಜೊರಿಜು
ಪರಿಮಳ ಮಯಗಾಯ್ ತೇಚು ಮಿನುಕ್ಕಿ
ಪ್ರಕೃತಿ ಕನಿವಿನ್ ತಾಯ್‌ವರ ತೋರುಂ
ಕುಡಗಿನ್ ಅರುಮ ಕೌದುಕಮಾಯಿ
ವಳಿಯೋರತ್ತಿನ್ ಕಾಯ್‌ಚೆಕಳಾಯಿ
ಮೃದು ಮರ್ಮರಮಾಯ್ ಕುಡಗಿನ್ ಕರಳಿಲ್
ಕಥೆಯಿಲ್ ಗಾದೆಯಿಲ್ ಉದಿರಿನೆಜುಂ
ಒರುಪಿಡಿ ಓರ್ಮಯಿಲ್ ಓರಂಜಿನ್ನುಂ

ಹರಿದ ಮಯತ್ತಿನ್ ಅಲಕಳ್ ಜೊರಿಜು
ಪ್ರಕೃತಿಯಿಲೀಣಂ ಕಾಟಿಲುದಿರ್ತು
ಋತುಬೇದತ್ತಿಲ್ ಪೊನ್ಮಣಿಕೋರ್ಕುಂ
ವಯಲೇಲಕಳುಡೆ ವಾತ್ಸಲ್ಯತ್ತಿಲ್
ತರಳಿತಯಾಯಿ ವುಳಕಿತಯಾಯಿ
ಕುಡಗಾಂ ಸುಂದರಿ ವಿಸ್ಮಯಮಾಯಿ
ನರುಮಣಮುದಿರುಂ ಪೂವನಿಯಾಯಿ
ಗತಕಾಲತ್ತಿನ್ ಘರ್ಜನಮಾಯಿ
ಕೊಯ್‌ತ್ತುಂ ಮೆದಿಯುಂ ಒರು.ಉತ್ಸವಮನ್ನ್
ಕೊಟ್ಟುಂ ಕುರವಯುಂ ಓರ್ಮಯಿಲಿನ್ನ್
ಕುಡಗಿನ್ ಸುರಭಿಲ ಅಭಿಲಾಷಂಜಳ್
ಕೃರಿಗಿಲ್ ಕಾಲಂ ಮುನ್ನಿಲ್ ಕಾಣ್ಮ
ಕದಿರಟ್ಟೀಡೂಂ ಕಣ್ಣೀರ್ ಪಾಡಂ.

ಕಾಪಿಗಳ್ ಪೂಕಾನ್ ಪುದುಮಯ ಪೆಯ್ತು
ಪೂಕಳ್ ವಿರಿಞು ನಿರಞು ಕವಿಞು
ಕಾಟುಂ ಮಯಯುಂ ಉಣರ್ನು ತಿಮಿರ್ತು
ಅಟ್ಟಿಕ್ಕಿಳಿಕಳ್ಕ್ಕುಲ್ತ್ಸವಮಾಯಿ
ಮಂಞುಂ ವೆಯಿಲುಂ ಅಗಂಬಡಿಯಾಯಿ
ಪೊನ್ನಿನ್ ಪಯಮೊರು ಪಿಡೆನಿರೆಯಾಯಿ
ಅದಿರು ಕಡನ್ನು ಕುಡಗಿನ್ ಪೆರುಮಯಿಲ್
ಸುಕೃತ್ ತೇನ್ಮಯ! ಮೇಡಕಾಟಿಲ್
ಕಲಿಕಾಲತ್ತಿನ್ ತೇರುತೆಳಿಚ್ಚು
ಚುಡುನೀರ್ ಪಕ್ಷಿ ಇರಂಬುನ್ನಿವಿಡೆ?
ಕುಡಗಿನ್ ಸುಂದರ ಸಂಗಲ್ಪಙಳ್
ಕ್ಕರಿಗಿಲ್ ಕಾಲಂ ಕಾತುಕಿಡಪ್ಪು
ಕರಿನಾಗತ್ತಿನ್ ತೀಕಣ್ಣುಕಳಿಲ್
ಕುಡಗುರುಗುನ್ನು - ಪೂ ಉದಿರುನ್ನು.

ಇದುವಯಿ ಒಯುಗುಂ ನದಿ (ತಾಯ್) ಕಾವೇರಿ
ಪುಳಕ ಪೂಮಯ ಪೆಯ್ತು ಚಿರಿಚ್ಚು
ಕುಮಿಳಕಳೊರುಪಿಡಿ ಉನ್ಮಾದತ್ತಿನ್
ಕುರುಮುಯಿ ಮೊಟ್ಟುಕಳ್ ಕೋರ್ತು ರಸಿಚ್ಚು
ಪಲದೇಶಕ್ಕಾರ್ ಭಾಷಕಳ್ ತೀರ-
ಕುಳಿರಿಲ್ ತಳಿರಾಯ್ ತೀರ್ಥಮೆಡುತ್ತು
ವಯಿಕಳ್ ತಾಂಡಿ ಪೋಯವರಿನ್ನುಂ
ಕುಡಗಿನ್ ನಿನವಿಲ್ ತುಡಿಕೊಟ್ಟುನ್ನು
ಕಾಲಂ ಮಾರಿ ಕಥಕಳ್ ಮಾರಿ
ಕಾವೇರಿ ನದಿ ಪಲಕುರಿ ಋತುವಿನ್ ಚೇಲಯಣಿಞು ಪುಳಞು ಕುಣುಞಿ
ಪಾರಾವಾರಂ ತೇಡಿ ಪುದು ಪುದು
ನಾಡುಕಳ್ ತಾಂಡಿ ಪಯಮಕಳ್ ಚೂಯುಂ
ಪವಿಯ ಕುನ್ನಿನ್ ತಾಯ್‌ವರಯಿಲ್ ಕಿಳಿ
ಕುಯಲೂದುನ್ನು ಗದ್‌ಗದ ಮಾಯಿ
ಕುಡಗಿನ್ ಓರ್ಮಕಳ್ 'ನಿಶ್ಚಲ ದೃಶ್ಯಂ'

- ದೇವಿದಾಸ್. ಕೆ. ಪಿ.

# ಏಕ್ತಾ

ಹಿಂದೂ ಮುಸ್ಲಿಂ ಸಿಖ್ ಇಸಾಯಿ
ಕೊಯಿ ಖುದಾ ಕಹೆ ಕೊಯಿ ಸಾಯೀ
ಕಲೆಕ್ಟರ್ ಹೋ ಯ ನಾಯಿ
ಹಮ್ ಸಬ್ ಹ್ಯೆಂ ಭಾಯಿ ಭಾಯಿ.

ಏಕ್ ಮಾ ಕೆ ಕೋಖ್ ಸೆ ಜನ್ಮೆ
ಏಕ್ ಹೀ ರಕ್ತ್ ಹೈ ಹಮಾರೆ ತನ್ಮೆ
ಸಚ್ಚಾಯಿ ಹೈ ಭರ್‌ಕರ್ ಇಸ್ಮೆ
ಏಕ್ಹೀ ಆತ್ಮಾ ಹೈ ಹಮ್‌ಮೆ.

ಪರ್ ದಂಗೆಫಸಾದ್ ಕ್ಯೋಂ ಹೈ ಹೋತೆ
ಕ್ಯೋಂ ಛೋಡ್‌ಜಾತೆ ಸಬ್‌ಕೋ ರೋತೆ
ಔರ್ ವಿಧ್ವಾ, ಬೇಘರ್ ಕ್ಯೋಂ ಹೋಜಾತೆ
ಖುದ್ ಕ್ಯೋಂ ಜೀವಿತ್ ರಹ್‌ತೆ.

ನ ನ ನಹೀಂ ಕರ್ತೆ ಯಹ್ ಸಬ್ ಕುಛ್
ಶಪಥ್ ಯೆ ರಹೆ ಹಮಾರಾ ಸಚ್‌ಮುಚ್
ಏಕ್ ಸಾಥ್ ಮಿಲ್ ರಹೇಂಗೆ ಹಮ್
ತೋ ಕ್ಯೋಂ ನ ಹೋಗಾ ಯಹ್ ಸಬ್ ಕಮ್.

- ತೌಫೀಕ್. ಪಿ. ವೈ.
ಮಡಿಕೇರಿ

# "ಹುಷಾರ್ ಹಾಂಗಾ ಸುಣೆ ಅಸ್ಸಾತ್"



ಹಾಂಗಾ ಏಕ್ ದೋನ ನ್ಹಯ ಮಸ್ತ ಸುಣೆ ಆಸ್ಸಾತಿ
ಗೋರೆ ಕಾಳೆ, ಸಾನ ಹೋಡ, ಬಾಲ ಆಶಿಲ್ಲೆ,
ಬಾಲನಾ ಆಶಿಲ್ಲೆ, ಜಾಗ್ರತೆ, ಹುಷಾರ್....
ತುಮ್ಹೀ ಗೇಟಾ ಭಾಯರಿ ಆಸಲ್ಯಾರ ಹೀ ಭಿತ್ತರ ದಾಕ್ನೂನ
ವಾಸ ಗ್ರಹಣ ಕೊರತಾತಿ... ತುಮ್ಹೀ ಭಿತ್ತರ ಆಯಲವೇ
ಬಾಲ ಹಾಲ್ಯತೇರಿ ಲಾಗ್ಗೀ ಧಾವ್ನ ಎತ್ತಾತಿ...
ಚಾಬನಾತಿ ತುಮಕಾ ಭಾರೀ ಮೋಗ ಕರತಾತಿ....
ತುಮಗೆಲೆ ಹಾತ ಚಾಟತಾತಿ, ಪಾಯ ಚಾಟತಾಚಿ
ಚಿಕ್ಕೆ ಪ್ರೀತಿ ಕೆಲ್ಯಾರಿ ತುಮಗೆಲೆ ಕಿಶ್ಯಾಚೆ
ವಾಸಘೆತ್ತಾಟಿ... ತುಮಕಾ ಪಾಪ ದಿಸ್ಸೂನ
ಬಿಸ್ಕೇಟ - ಚಾಕಲೇಟ ಘಾಲ್ಯಾರಿ ಖಾಯನಾತಿ
ತುಮಕಾ ಆಶ್ಚರ್ಯ ಜಾಯತ, ಜಾಲ್ಯಾರ
ವಿಚಾರ ಕರನಾಕಾತಿ.. ಕಿಶ್ಯಾದಾಕ್ನೂನ ಏಕ - ದೋನ
ನೋಟ ಕಾಡ್ನ ತಾಜ್ಜೆ ಮುಖಾರಿ ಘಾಲಾತಿ...
ನೋಟ್ಯಾಚ ಪಳೈತೇರಿ ರಾವತಾತಿ... ಜಾತ್ಯಾರಿ
ಲಾಗಿ ಏನಾತಿ... ಓಹ್ ಭಾರೀ ಆಶ್ಚರ್ಯ....
ಆತ್ತ್ ಪಾಂಚ್... ಧಾ ರೂಪಯಾಟೆ ನೋಟ
ಘಾಲ್ನ ಪಳಯಾಚಿ....
ಏಕಪಂತ ನೋಟಾಕ್.. ಏಕ ಪಂತಾ ತುಮಕಾ
ಪಳೈತೇರಿ ರಾವತಾತಿ... ತುಮಕಾ ಆನಿಕೀ ಆಶ್ಚರ್ಯ...
ಜಾವುಚೆ ಸಹಜ... ಆತ್ತ ಪನ್ನಾಸ - ಶಂಭರ
ರೂಪಯಾಟೆ ನೋಟ ಘಾಲ್ನ ಪಳಯಾಚಿ

ಕೂಡ್ಲೆ ಧಾವ್ನೂ ಏವ್ನೂ ತೊಂಡಾಂತು ಧೋರ್ನು

ಭಿತ್ತರ ವಚ್ನೂನ ದವರ್ನ ಎತ್ತಾತಿ

ಧಾವ್ನೂ ಏವ್ನೂ ತುಮಕಾ ಪಳೈತೇರಿ

ಲಾಳ ಗಳೈತೇರಿ ರಾವತಾತಿ....

ಓಹ್ ಭಾರೀ ಆಶ್ಚರ್ಯ .... ವಿಚಿತ್ರ ಸುಣೇಮ್ಹಣೇತ

ವಾಪಸ ನೋಟ ಘಾಲ್ಯಾರಿ - ಗಪಕ್ ಕೋರ್ನು ತೊಂಡಾಂತು

ಧೋರ್ನುಭಿತ್ತರ ಧಾವುತಾತಿ...

ಆತ್ತ ತುಮಕಾತ ಮೋಗಾನ ಪಳೈತೇರಿ ರಾವತಾಚಿ....

ಹಲೋ ಟಾಮಿ ಮ್ಹಳ್ಯಾರಿ ಘುರೋ ಪ್ರಿತೀನ

ತುಮಚ್ಛೇರ ಉಡ್ಡಿ ಮಾರತಾತಿ...


ಲಾಲೂ - ಕಾಲೂ - ಜಯಾ - ಮಾಯಾ

ಮ್ಹೋಣು ಆಪೈಲ್ಯಾರಿ ಧಾವ್ನೂ ಧಾವ್ನೂ ಎತ್ತಾತಿ

ವಾಪಸ ತುಮಗೆಲೆ ಪಾಯ ಚಾಟತ ರಾವತಾತಿ

- ವರದಾಸುತ ಚೇತನ

# ಕೊತ್ತ ಶತಾಬ್ದಾನಿಕಿ ಸ್ವಾಗತಂ!



ವಚ್ಚಿಂದಿ ವಚ್ಚಿಂದಿ 21 ವ ಶತಾಬ್ದಂ
ತೆಚ್ಚಿಂದಿ ತೆಚ್ಚಿಂದಿ ಎನ್ನೆನ್ನೋ ಕಾನುಕಲು
ಗಾಂಧೀಯ ಗಾಲಿವೆನು ತಿರುಗಿಂದಿ
ಶಾಂತಿ-ಅಹಿಂಸಲು ಈರುವಯ್ಯಾಯಿ

ದೇಶೀಯ ಮಂತ್ರಂ ವೆಳ್ಳಿ, ಜಾಗತೀಕರಣ ಮಂತ್ರಂ ವಚ್ಚಿಂದಿ ||ವ||
ವಯಸುಮಳ್ಳಿನ ರಾಜಕೀಯನೇತಲಕಿ, ಅಧಿಕಾರವರ್ಗಾನಿಕಿ
LKG-UKG ಬಡಿಪಸಿಪಿಲ್ಲಲಕಿ
ವಂಟಗದಿ ಗಂಗಮ್ಮ ತಲ್ಲಿಕಿ ಕೂಡಾ
E-Mail - internett, Dot com, Mouse ಲ ಜ್ವರಂ ವಚ್ಚಿಂದಿ ||ವ||

ಮನ ಜಾತೀಯ ಧಾರ್ಮಿಕ ರಾಮಾಯಣ - ಮಹಾಭಾರತಾಲು ಮನಕಿ ವದ್ದು
ಮನ ಪಸಿಪಿಲ್ಲಲಿಕಿ ಕೂಡಾ ಚಂದಮಾಮ, ಬಾಲಮಿತ್ರುಲ ಕಥಲು ಅಸಲೇವದ್ದು
ಓಸಮಾ ಬಿನ್ ಲಾಡೆನ್-ಜಾರ್ಜ್‌ಬುಷ್-ಪೊವೆಲ್-ಬ್ಲೇರ್-ಮುಷ್ರಾಫ್‌ಗಾದಲೇಚಾಲು
ಇಂಕಾ ಕಾವಲಂಟೆ ನೇಪಾಳ್ ರಾಜುವಾರಿ ಕುಟುಂಬಾನಿ ಅಮ್ಮಾಯಿ ಕೋಸಂ
ಭೀಭತ್ಸಂಗಾ ಹತಮಾರ್ಚಿನ ವಾರಿತನಯುಣಿ ಪ್ರಮೆಯಮೇಚಾಲು ||ವ||

ಡಕಾಯಿತ್ ರಾಣಿ ಫೂಲನ್‌ದೇವಿ - ಜಯಲಲಿತ - ದಾವುದ್ ಇಬ್ರಾಹಿಂ,
ವೀರಪ್ಪನ್ ಕಥಲು ವುಂಟೇ ವುಂಡನೀಯಂಡಿ,
ನೇನೇ ಪೆದ್ದನ್ನಂಟೂ ಪೆತ್ತನಂ ಚೋಸ್ತೂ
ಅದ್ದಾಲ ಮೇಡಲೋ ಕೂರ್ಚೊನಿ ಪ್ರಪಂಚಾನಿಕಿ ಅಂತಾ
ಬೆಚ್ಚು ಪೆಟ್ಟಿನ ಅಮೇರಿಕಾ ಇಪ್ಪಟಿ ದೀನಸ್ಥಿತಿ
ತಾಲಿಬಾನ್ - ಲಾಡೆನ್ - ಅಲ್ - ಖಾಯಿದಾ,
ಪಾಕ್-ಮುಷ್ರಫ್-ಜೈಶ್-ಎ- ಮೊಹ್ಮದ್ ಇಲಾಂಟಿವಿ
ಮನ ಜಾತೀಯ ಪ್ರಜಲಕಿ ಇಕ ಆದರ್ಶಾಲೇ - ? ||ವ||

- ಸಬಲಂ ಭೋಜಣ್ಣಾ ರೆಡ್ಡಿ
ಕುಶಾಲನಗರ.

# "ಅವು ಎಂಚಿನಾ" ? (ಅದೇನು) ?

ಮಾರ್ಗದ ಬದಿಟ್ಟ್ ಎಂಕೊಂಜಿ ತಿಕ್ಕ್ಂಡ್,
ದುಡ್ಡುದ ಕೈಚೀಲ ಅತ್ತ್, ಕೀ ಬಂಚ್ ಅತ್ತೇ ಅತ್ತ್,
ಬ್ಯಾಂಕ್‌ದ ಚೆಕ್ಕ್ ಅತ್ತ್, ಬಂಗಾರ್‌ದ ಚೈನ್ ಅತ್ತೇ ಅತ್ತ್.
ಆಂಡಲಾ ಎಂಕೊಂಜಿ ತಿಕ್ಕ್ಂಡ್ -!- ಅವು ಎಂಚಿನಾ ||?||

ಪೊರ್ಲ್‌ದ ಪೊಣ್ಣು ನಡಪುನಗ ಬೂರುನಾ ಪಾದಸರ ಅತ್ತೇ ಅತ್ತ್,
ಮುತ್ತುಗ್ ಮುತ್ತು ಕೊರ್‌ನಗಾ ತೆರಿಯಾಂದೇ ಬೂರ್‌ನಾ
ಮಾಂಗಲ್ಯ ಕರಿಮಣೀಲಾ ಅತ್ತ್,
ಸೊಂಟದ ಬೊಳ್ಳಿದ ಕಂಠಿಲಾ ಅತ್ತೇ ಅತ್ತ್,
ಆಂಡಲಾ ಎಂಕೊಂಜಿ ತಿಕ್ಕ್ಂಡ್ -!- ಅವು ಎಂಚಿನಾ ||?||

ಪರ ಕಾಲದ ರಾಜೇರ್ ದಿಯಿನಾ ಕೊಪ್ಪರಿಗೆಲಾ ಅತ್ತ್,
ನಾಗದೇವತೆ ನಲಿಪುನಾಗ ಬೂರ್ನ ಮಾಣಿಕ್ಯಲಾ ಅತ್ತೇ ಅತ್ತ್,
ಆಂಡಲಾ ಎಂಕೊಂಜಿ ತಿಕ್ಕ್ಂಡ್ -!- ಅವು ಎಂಚಿನಾ ||?||

ಪನ್ಪೆ ಒಂಜಿ ಗುಟ್ಟುದ ವಿಷಯ "ಏರೆಡ್ಲಾ ಪನಡೇ",
ನವ ಗರ್ಭೊಡ್ ಅಪಗಾ ಪುಟ್ಟುನಾ ಒಂಜಿ ಆಣ್ ಬಾಲೆ,
ಮಾರ್ಗದ ಬದಿಟ್ಟ್ ತಿಕ್ಕ್ಂಡ್.

- ಟೆಲಿಕಾಂ ಕೃಷ್ಣ
ಕುಶಾಲನಗರ.

# ಕಾಲಂ ಮಾರಿಪೋಚ್ಚಿ

ಅಂದ ಕಾಲತ್ತಿಲ್
ಉಲಗಶಾಂದಿಕ್ಕಾಗ
ವಸು, ಗಾಂಧಿ, ಬುದ್ಧನ್
ಪಾಳ್ವೆಕೊಡುತ್ತಾರ್
ಇಂಡ್ರ್ರು ಕಾಲಂ ಮಾರಿಪೋನದಾ ?
ಶಾಂದಿ ಎಂಗ್ಯೆ ? ಶಾಂದಿ ಎಂಗ್ಯೆ ?
ಅಂಗ್ಯೆ ಇಂಗ್ಯೆ ಎಂಗೆಂಗುಂ ತೇಡ್‌ಗಿಂಡ್ರ್ರು.
ಕಾಲಂ ಮಾರಿಪೋನದಾ
ಇಲ್ಲೈ
ಮನಿದನ್ ಚಿಂದನೈಗಳ್
ಮಾರಿಪೋನದು
ಪದವಿ, ಪಣಕ್ಕಾಗ, ಧರ್ಮತ್ತಿನ್
ಪೇರ್‌ಲೆ ತಾಕ್‌ದಲ್, ಪೋರಾಟಂ
ನಡಕಿಂಡ್ರದ್
ವೀಟ್ ವೀಟ್‌ಲೇ
ತೀವ್ರವಾದಿ ಪೊರಕಿಂಡ್ರಾರ್‌ಗಳ್
ನಿಕ್ಕಟ್ಟುಂ ನಿಕ್ಕಟುಂ
ಪೋರಾಟಂ ತಾಕ್‌ದಲ್
ಮನಿದನ್ಮೆ ಕಟ್ಟಿಡಂಗಳ್
ಕಟ್ಟಿಲಾಂ
ಉಲಗ್‌ತ್ತಿಲ್ ಶಾಂದಿ ವರಟ್ಟುಂ, ವರಟ್ಟುಂ
ಕಾಲಂ ಮಾರಿಪೋಗ ಎಲ್ಲೈ
ಮನಿದನ್ಮೆ ಮಾರಿನದ್
ತಿರಿಲೆ ಅಲ್ಲೈಂಜದ್
ನಿಕ್ಕಟ್ಟುಂ ನಿಕ್ಕಟ್ಟುಂ
ಉಲಗ ಶಾಂದಿ ವರಟ್ಟುಂ

- ಟಿ. ಎಂ. ಚಂದ್ರಶೇಖರ
ವೀರಾಜಪೇಟೆ.

# ಹಮಾರಾ ನಾಡ ಹಬ್ಬ- ದಸರಾ

ಕ್ಯಾ ಖೂಬ್ ಸಜ್ ರಹಾಹೈ ಯೆ ಮರ್ಕರಾ ಹಮಾರ
ವಾಹ್ ಖೂಬ್ ಲಗ್ ರಹಾಹೈ ಯೆ ದಸರಾ ಹಮಾರ

ಯೆ ಶಾನೇ ಮರ್ಕರಾ ಹೈ, ಯೆ ಆನೇ ದಸರಾ ಹೈ
ಇಸ್ ದಸರಾ ಕೀ ಯಾರೋ, ಹೈ ಶಾನ್ ಹೀನಿರಾಲೆ
ಇಸ್ಕೋ ನಿಖಾರ್ ಆಲಾ, ಚಾರ್ ಆನ್ ಭೇನಿರಾಲೆ.

ಯೆ ಶಾನೇ ಮರ್ಕರಾ ಹೈ, ಯೆ ಆನೇ ದಸರಾ ಹೈ
ಈದೋಂ ಮೆ ಸಬ್ಸೇ ಅಫ್‌ಜಲ್, ಹೈ ಏ ದಸರಾ ಹಮಾರ
ಇಸ್ಕೋ ಮನಾ ರಹಾ ಹೈ ಯೆ ಕೊಡಗು ಸಾರ ಸಾರ

ಯೆ ಶಾನೇ ಮರ್ಕರಾ ಹೈ ಯೆ ಆನೇ ದಸರಾ ಹೈ
ನಿನ್ ಬತ್‌ಸೆ ದಸರಾಕೀ, ಕರ್ನಾಟಕ್ ಮೇ ಸಾರೆ ಯಾರೋ
ಮಷ್‌ಹೂರ್ ಹೋ ಗಯಾ ಹೈ ಏ ಮರ್ಕರಾ ಹಮಾರ

ಆಯಾ ದಸರಾ ಆಯಾ, ಖುಷಿಯಾಂ ಭಿ ಸಾಥ್ ಲಾಯ
ಪೀರೋ ಜವಾನ್ ಸಾರೆ ಖುಷಿಯಾಂ ಮನಾರಹೆ ಹೈಂ
ಮಾಸೂಂ ಛೋಟೆ ಬಚ್ಚೆ ನಗ್ಮೇ ಲುಟಾಕಹೆ ಹೈಂ

ಆಯಾ ದಸರಾ ಆಯಾ ಖುಷಿಯಾಂ ಭಿ ಸಾಥ್ ಲಾಯ
ಹರ್ ಸಾಲ್ ಬಢ್ ರಹೀ ಹೈ, ಬಸ್ ಶಾನೆ ದಸರಾ ಕೀ
ಹರ್ ರೋಜ್ ಬಡ್ ರಹೀ ಹೈ ಪೆಹಚಾನ್ ಮರ್ಕರಾಕೀ

ಆಯಾ ದಸರಾ ಆಯಾ ಖುಷಿಯಾಂ ಭಿ ಸಾಥ್‌ಲಾಯ
ದಸ್ ದಿನ್ ಕೀ ಈದ್ ಹೈ ಏ, ಲೆಕಿನ್ ಬದಲ್ ಬದಲ್ಕೇ
ಲೇತೇ ಹೈಂ ಮಜಾ ಸಾರೆ, ಬೂಢೆ ಜವಾನ್, ಬಚ್ಚೆ
ಯೆ ಶಾನೇ ದಸರಾ ಹೈ ಯೆ ಆನ್ ಮರ್ಕರಾ ಹೈ


ಮಂಟಪ್ ಕಹಿಂ ಸಜೇ ಹೈಂ ಸರ್‌ಗಂ ಭಿ ಸಜ್ ರಹೇ ಹೈಂ
ಬಾಜೇ ಕಹೀ ಹೈಂ ಯಾರೋ, ತಾಷೆ ಭಿ ಬಜ್ ರಹೇ ಹೈಂ

ಆಯಾ ದಸರಾ ಆಯಾ ಖುಷಿಯಾಂ ಭಿ ಸಾಥ್ ಲಾಯ
ಮಿಲ್‌ಕರ್ ಮನಾವೊ ಯಾರೋ ಖುಷಿಯಾಂ, ದಿಲೆ ದಸರಾ ಲುಭಾಯಾ.

- ಕ್ಯೂ. ಎಸ್. ಚಾಂದ್
ಮಡಿಕೇರಿ.

# ಮಕ್ಕಳ ಕವನ ವಿಭಾಗ

# ಕಾರ್ಖಾನೆ



ಬೇಡ ಮಿತ್ರರೇ
ಕೆಡವಿಬಿಡಿ.....
ಕೆಡವಿಬಿಡಿ ಕಾರ್ಖಾನೆಯ
ಹಿಂತೆಗೆದುಕೊಳ್ಳಿ ಕಚ್ಚಾವಸ್ತುಗಳ
ಬೇಡ ನಮಗೀ ಕಾರ್ಖಾನೆ !

ದ್ವೇಷ ದಳ್ಳುರಿಗಳ ಹೊಗೆಯನುಗುಳಿ
ದಿಗಿಲಿನ ಕರಿನೆರಳ ಪಸರಿಸಿ
ನೆತ್ತರಿಂದ ನೆಲವ ಕೆಡಿಸಿ
ಭಯವ ಉತ್ಪಾದಿಸುವ
ಭಯೋತ್ಪಾದನೆಯ ಕಾರ್ಖಾನೆ
ಬೇಡ ನಮಗೆ !


ಜಗಕೆ ಮೊಗವ ತೋರದೆ
ಜಗವ ಸಲಹುವ
ಸಲ್ಲಲ್ಲಾಹು ಅಲ್ಲಾಹುವಿಗೆ.......
ಜಗತ್ತಿಗೇ ಭಯೋತ್ಪಾದನೆಯ
ಮೊಗವ ತೋರುವ ಪುತ್ರರೇ.... ?

ಧರ್ಮ ಯುದ್ಧವೆಂಬ ಸೋಗಿನಲ್ಲಿ
ಸಕಲ ಧರ್ಮೀಯರ ನರಮೇಧಕ್ಕೆ
ನಾಂದಿ ಹಾಡುವ ನಿಮ್ಮ
ಕೆಟ್ಟ ಕಾರ್ಖಾನೆಯ ಕಸುಬ
ಮೆಚ್ಚಲಾರ ಅವ.....
ಬದುಕಿನರ್ಥವ ಕಳೆದು ಬೇಸತ್ತ ನೀವು
ಬದುಕ ಅರಳಿಸ ಹೊರಟ ಮೊಗ್ಗುಗಳು ನಾವು

ಬೇಡ ಮಿತ್ರರೇ......
ಕೆಡವದಿರಿ ಮಾನವ ಧರ್ಮವ,
ಕೆಡವಿಬಿಡಿ ಆ ನಿಮ್ಮ ಕಾರ್ಖಾನೆಯ
ಭಯೋತ್ಪಾದಿಸುವ ಆ ....... ಕಾರ್ಖಾನೆಯ !

- ಉಳ್ಳಿಯಡ ಪಿ. ಪೊನ್ನಣ್ಣ
ಗೋಣಿಕೊಪ್ಪ.

# ತುಂಟಿಲಿ



ಮಡಿಕೇರಿ ಊರಲ್ಲಿ
ಮಹದೇವ ಪೇಟೇಲಿ
ಮಂಜಣ್ಣನ ಮನೆಯಲ್ಲಿ
ಇದ್ದಿತೊಂದು ತುಂಟಿಲಿ ||

ಅಬ್ಬಬ್ಬಾ ಏನದರ ಕಾಟ
ದಿನ ಬೆಳಗಾದರೆ ಬರೀ ಗೋಳಾಟ
ಹಲ್ಲು ಕಚ್ಚುವ ಕಟಕಟ
ಓಡಿ ಹೋಗುವುದು ಪುಟಪುಟ ||

ಬುಟ್ಟಿಲಿ ಇದ್ದ ಬಾಳೆಹಣ್ಣು
ಬಿದ್ದಿತು ಅದರಲ್ಲಿ ಇಲಿಯ ಕಣ್ಣು
ಮಾಡಿತು ಮೂಷಿಕ ಹಣ್ಣಿನ ಗಮ್ಮತ್ತು
ಬೆಳಗಲಿ ನೋಡಲು ಏನಿದೆ ಮಣ್ಣು ||

ಕೋಸಂಬರಿಗೆಂದು ತಂದ ಕ್ಯಾರೆಟ್ಟು
ಮಾಡಿತು ಮೂಷಿಕ ಉಪ್ಪಿಟ್ಟು
ಅಡಿಗೆ ಮನೆಯಲ್ಲೆಲ್ಲ ಕಡಲೆ ಹಿಟ್ಟು
ಮಂಜಣ್ಣನಿಗೆ ಹಿಡಿಯಿತು ತಲೆಚಿಟ್ಟು ||


ಮಕ್ಕಳ ಸಾಕ್ಸದು ಅಟ್ಟದ ಮೇಲೆ
ಆಯಿತು ಇಲಿಗಳ ಬೆಚ್ಚನೆ ನೆಲೆ
ಮಡದಿಯ ಬಣ್ಣದ ಸುಂದರ ಸ್ಯಾಲೆ
ತೋರಣವಾಯಿತು ಇಲಿಗಳ ಮನೆಗೆ ||

ಇಲಿಯನು ಕೊಲ್ಲಲು ಶಪಥವ ಮಾಡಿ
ಬೋನನು ತಂದನು ನೆರೆಯಲಿ ಬೇಡಿ
ತೆಂಗಿನ ಚೂರನು ಬೋನಲಿ ಸೂಡಿ
ನಾನಾ ವಿಧದ ಪ್ರಯತ್ನವ ಮಾಡಿ ||

ಬಿದ್ದೇ ಬಿದ್ದಿತು ತುಂಟಿಲಿ
ಮಂಜಣ್ಣನ ಕಾಡಿದ ಹೆಬ್ಬಿಲಿ
ಹಿಗ್ಗಿದ ಮಂಜಣ್ಣ ಹಿರಿಹಿರಿ
ಇಲಿಯ ಕಣ್ಣದು ಪಿಳಿಪಿಳಿ ||

- ಎ. ಎಸ್. ಶ್ರೀಷ್ಮ ರಾವ್
ಮಡಿಕೇರಿ.

# ನನ್ನಜ್ಜಿ



ನನ್ನ ಅಜ್ಜಿ ಮುದ್ದಾದ ಅಜ್ಜಿ
ಕಥೆ ಹೇಳ್ತಾಳೆ,
ಹಿಂದಿನ ಕಾಲದ ಕಥೆಯನ್ನ ಹೇಳಿ
ನಕ್ಕೇ ನಗಿಸ್ತಾಳೆ.
ನಕ್ಕೇ ನಗಿಸಿ ಆದ ಮೇಲೆ
ನೀತಿಯೊಂದನ್ನ ಹೇಳ್ತಾಳೆ.
ಆ ನೀತಿಯನ್ನು ನಾವು ತಿಳಿದುಕೊಂಡ್ರೆ
ಗುಡ್ ಆಗ್ತೀವಿ.

**ಯಶವಂತ ಮರಾಠೆ,** ಮಡಿಕೇರಿ.

# ನನ್ಹೆ ಸಿತಾರೆ

ಹೋತಿ ಹೈ ನನ್ಹೆ ಬಚ್ಚೋಂ ಕಾ ಮನ್,
ಗಂಗಾ ನದಿ ಜೈಸೀ ಹೀ ಪಾವನ್;
ಸಿಖಾತೇ ಹೈಂ ಹಮೇ ಪ್ಯಾರ್ ಕೀ ಭಾಷಾ,
ಹಂಸ್‌ತೇ, ಖೇಲ್‌ತೆ, ಕರ್‌ತೆ ತಮಾಶಾ.

ಉನ್‌ಕೇ ವಹ್ ಹಂಸ್‌ತೆ, ಖೇಲ್‌ತೆ, ಮುಸ್ಕುರಾತೆ ಚಹರೆ,
ಬೂಢೋಂ ಕೀ ಭೀ ಬನ್ ಜಾತೆ ಹೈಂ ಸಹಾರೇ;
ರಹ್‌ತೆ ಉನ್‌ಕೀ ಹೀ ಅನೋಖೀ ದುನಿಯಾ ಮೇ,
ಜಹಾಂ ಬಾಹ್ಯ ವಿಚಾರ್ ರಖ್ ಸಕೇ ನ ಕದ್‌ಮೇಂ.

ನ ನಫರತ್, ನ ವೇಷ್-ಭೂಷಾ ಕಾ ಭೇದ್,
ನ ಮನ್ ಮೇಂ ಕಿಸೀ ವಿಷಯ್ ಕಾ ಖೇದ್;
ಉನ್‌ಕೇ ಇಸ್ ಮುಗ್ಧತಾ ಸೇ ಹಮ್ ಭೀ ಸೀಖೆಂ
ಬಿನಾ ಭೇದ್-ಭಾವ್ ಕೇ ಜೀನೆ ಕೆ ತರೀಕೆ.

- ಪಿ. ಬಿ. ಪೂರ್ಣಿಮಾ, ಮಡಿಕೇರಿ.

## ದಸರಾ ಕವಿಗೋಷ್ಠಿ ಸಮಿತಿ, ಮಡಿಕೇರಿ

ಎಂ. ಶ್ರೀಧರ್ ಹೂವಲ್ಲಿ..... ಅಧ್ಯಕ್ಷರು

ಎಸ್. ಜಿ. ಉಮೇಶ್ ..... ಸಂಚಾಲಕರು

## ಸಮಿತಿ ಆಹ್ವಾನಿತರು

ವಿ. ಪಿ. ಸುರೇಶ್, ಕೆ. ಕೆ. ದಿನೇಶ್ ಕುಮಾರ್
ಮತ್ತು ಎಂ. ಎಸ್. ರಾಜೇಂದ್ರ ಕುಮಾರ್

## ಸದಸ್ಯರು

ಕೆ.ವಿ. ಪರಮೇಶ್, ಹೆಚ್. ಟಿ. ಅನಿಲ್, ಆನಂದ ಕೊಡಗು,
ಕೆ. ಎಂ. ಚಂಗಪ್ಪ, ಐನಂಡ ಎಂ. ಧನು, ಕೆ. ತಿಮ್ಮಪ್ಪ, ಶ್ರೀಮತಿ ಸವಿತಾ ರೈ,
ಕೆ. ಬಿ. ಮಹಾಂತೇಶ್, ಬಿ. ಎನ್. ಪುಷ್ಪರಾಜ್, ಎ. ಆರ್. ಕುಟ್ಟಪ್ಪ,
ರವಿಕುಮಾರ್, ಬಿ. ಸಿ. ದಿನೇಶ್, ಉಳ್ಳಿಯಡ ಡಾಟಿ ಪೂವಯ್ಯ.

## ಕವನ ಆಯ್ಕೆ ಸಮಿತಿ

ಭಾರಧ್ವಾಜ್, ಎಸ್. ಐ. ಮುನೀರ್ ಅಹ್ಮದ್,
ಯು. ಎಂ. ಪೂವಯ್ಯ, ಕೆ. ಜೀವನ್ ಚಿಣ್ಣಪ್ಪ.

## ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಲ್ಲಿ ಮಾರಾಟಕ್ಕೆ ಲಭ್ಯವಿರುವ ಕೊಡವ ಭಾಷಾ ಪುಸ್ತಕಗಳು

| | | |
|---|---|---|
| 1 | ಅಪ್ಪಚ್ಚ ಕವಿರ ನಾಲ್ ನಾಟಕ | ಉ. 50.00 |
| 2 | ಕಥೆ ಕೊಂಬ್ | ಉ. 10.00 |
| 3 | ತೇಂದುಳಿ | ಉ. 10.00 |
| 4 | ಮನೆಲೋರ್ ಮದ್ದ್ | ಉ. 10.00 |
| 5 | ಆನೆಬೆಪ್ಪು ನಾಡ್ | ಉ. 12.00 |
| 6 | ಚಿಗ್‌ರ್ | ಉ. 5.00 |
| 7 | ಬಾಳ್‌ಕ್ ಬೊಳಿ | ಉ. 10.00 |
| 8 | ಕೊಡವ ಚಂದೂಕ | ಉ. 30.00 |
| 9 | ಪೂವ್ ಮುಳ್ಳ್ | ಉ. 20.00 |
| 10 | ಚೋಮ | ಉ. 10.00 |
| 11 | ಕಾಮವ್ವಂಡ ಕವನ | ಉ. 10.00 |
| 12 | ಮಂಜಿನೊಳಗಿನ ಮಾತು | ಉ. 5.00 |
| 13 | ನವರಾತ್ರಿಯ ಕೋಲ್ಮಿಂಚು | ಉ. 10.00 |
| 14 | ಪೊನ್‌ತಕ್ಕ್ | ಉ. 10.00 |
| 15 | ಬಾಳ್ ಭಂಡಾಟ ನಾಟಕ | |
| 16 | ತಂಗಚ್ಚಿರ ಕಥೆಗೂಡ್ | |
| 17 | ಪಾಟ್‌ಜೊಪ್ಪೆ | |
| 18 | ಕೈಪು ಮೂವುಪು | |
| 19 | ಕಾವ್ಯಗುಚ್ಛ | ಉ. 5.00 |

**Printed at :HEERA ASSOCIATES OFFSET PRINTERS**
Valley Fair, Brahmins' Valley, Madikeri - 571 201 Tel : 25753